ಕ-ರೈಡ್
K RIDE

# ಸಂಪರ್ಕ

ಬಿ.ಎಸ್.ಆರ್.ಪಿ. ಸುದ್ದಿಪತ್ರ

ಕ-ರೈಡ್ ಹೌಸ್ ಜರ್ನಲ್

*ಸಂಚಿಕೆ: 02 *ಡಿಸೆಂಬರ್ –2023






## ಕೇಂದ್ರ ರೈಲ್ವೆ ಸಚಿವರ ಅಧ್ಯಕ್ಷತೆಯಲ್ಲಿ ಬಿ.ಎಸ್.ಆರ್.ಪಿ ಪರಿಶೀಲನಾ ಸಭೆ

ಕೇಂದ್ರ ರೈಲ್ವೆ, ಸಂವಹನ ಎಲೆಕ್ಟ್ರಾನಿಕ್ಸ್ ಮತ್ತು ಐಟಿ ಸಚಿವರಾದ ಶ್ರೀ ಅಶ್ವಿನಿ ವೈಷ್ಣವ್ ಅವರು 2023ರ ನವೆಂಬರ್ 27ರಂದು ಬೆಂಗಳೂರಿನಲ್ಲಿ ಬಿ ಎಸ್ ಆರ್ ಪಿ ಯ ಪರಿಶೀಲನಾ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಸುರಕ್ಷತಾ ಮಾನದಂಡಗಳನ್ನು ಸುಧಾರಿಸುವುದು, ಸಕಾಲದಲ್ಲಿ ಯೋಜನೆ ಪೂರ್ಣಗೊಳಿಸುವುದನ್ನು ಖಾತ್ರಿಪಡಿಸಿಕೊಳ್ಳುವುದು ಮತ್ತು ಕರ್ನಾಟಕ ಸರ್ಕಾರ, ಭಾರತೀಯ ರೈಲ್ವೆ ಮತ್ತು ಕ-ರೈಡ್ ನಡುವೆ ಉತ್ತಮ ಸಮನ್ವಯ ಕಾಯ್ದುಕೊಳ್ಳುವ ಪ್ರಾಮುಖ್ಯತೆಯ ಬಗ್ಗೆ ಸಚಿವರು ಪ್ರಮುಖವಾಗಿ ಪ್ರಸ್ತಾಪಿಸಿದರು. ಯೋಜನೆಯ ಯಶಸ್ವಿ ಅನುಷ್ಠಾನವನ್ನು ಖಾತ್ರಿಪಡಿಸಿಕೊಳ್ಳಲು ಮೂರು ಪಾಲುದಾರರ ನಡುವೆ ಪರಿಣಾಮಕಾರಿ ಸಂವಹನ ಮತ್ತು ಸಹಯೋಗದ ಅಗತ್ಯವನ್ನು ಅವರು ಒತ್ತಿ ಹೇಳಿದರು ಮತ್ತು ಯೋಜನೆಯನ್ನು ಸಕಾಲದಲ್ಲಿ ಮತ್ತು ನಿಗದಿಪಡಿಸಿದ ಬಜೆಟ್‌ನಲ್ಲಿ ಪೂರ್ಣಗೊಳಿಸುವುದನ್ನು ಖಾತ್ರಿಪಡಿಸಿಕೊಳ್ಳಲು ಕಾಮಾಗಾರಿ ಪ್ರಗತಿಯ ಮೇಲ್ವಿಚಾರಣೆ ಮಾಡಿದರು. ಈ ಯೋಜನೆಯು ಉತ್ತಮ ಯಶಸ್ಸನ್ನು ಪಡೆಯುತ್ತದೆ ಮತ್ತು ಬೆಂಗಳೂರಿನ ಜನರಿಗೆ ಪ್ರಯೋಜನವನ್ನು ನೀಡುತ್ತದೆ ಮತ್ತು ಸಕಾಲದಲ್ಲಿ ಯೋಜನೆ ಪೂರ್ಣಗೊಳಿಸಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಅವರು ಭರವಸೆ ನೀಡಿದರು. ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಸಂಸದರಾದ ಶ್ರೀ. ಪಿ.ಸಿ. ಮೋಹನ್, ಬೆಂಗಳೂರು ದಕ್ಷಿಣ ಸಂಸದರಾದ ಶ್ರೀ. ತೇಜಸ್ವಿ ಸೂರ್ಯ ಮತ್ತು ಕ-ರೈಡ್, ಭಾರತೀಯ ರೈಲ್ವೆಯ ಇತರ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಕ-ರೈಡ್ ಎಂಡಿ ಅವರ ಅಧ್ಯಕ್ಷತೆಯಲ್ಲಿ ಕಾರಿಡಾರ್-2 ಮಲ್ಲಿಗೆ ಮಾರ್ಗದ ಪ್ರಗತಿ ಪರಿಶೀಲನಾ ಸಭೆ



ಬೆಂಗಳೂರು ಉಪನಗರ ರೈಲು ಯೋಜನೆಯ ಪ್ರಗತಿ ಪರಿಶೀಲನಾ ಸಭೆಯು ಡಾ॥ ಎನ್.ಮಂಜುಳ, ವ್ಯವಸ್ಥಾಪಕ ನಿರ್ದೇಶಕರು, ಕ- ರೈಡ್ & ಕಾರ್ಯದರ್ಶಿ, ಐಡಿಡಿ, ಭಾರತ ಸರ್ಕಾರ ಇವರ ಅಧ್ಯಕ್ಷತೆಯಲಿ 20 ಡಿಸೆಂಬರ್ 2023 ರಂದು ಕ- ರೈಡ್ ನ ಕಾರ್ಪೊರೇಟ್ ಕಚೇರಿಯಲ್ಲಿ ನಡೆಯಿತು. ಕ-ರೈಡ್ ಹಿರಿಯ ಅಧಿಕಾರಿಗಳು, ಸಂಸ್ಥೆಯ ಸಾಮಾನ್ಯ ಸಲಹೆಗಾರರು, ಮತ್ತು M/s ಎಲ್ & ಟಿ ಅಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.








## ಮಾನ್ಯ ಸಚಿವರಿಂದ ಬಿಎಸ್‌ಆರ್‌ಪಿ ಸುದ್ದಿಪತ್ರ 'ಸಂಪರ್ಕ' ಬಿಡುಗಡೆ

ಕರ್ನಾಟಕ ಸರ್ಕಾರದ ಭಾರೀ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರಾದ ಗೌರವಾನ್ವಿತ ಡಾ॥ ಎಂ.ಬಿ. ಪಾಟೀಲ್ ಅವರು ಬಿ ಎಸ್ ಆರ್ ಪಿಯ ದ್ವೈಮಾಸಿಕ ಸುದ್ದಿಪತ್ರ 'ಸಂಪರ್ಕ'ವನ್ನು ಪಾಲುದಾರರು ಮತ್ತು ನಾಗರಿಕ ಗುಂಪುಗಳ ಪ್ರತಿನಿಧಿಗಳ ಸಮಕ್ಷಮದಲ್ಲಿ 2023ರ ನವೆಂಬರ್ 9 ರಂದು ಬೆಂಗಳೂರಿನ ಕ-ರೈಡ್ ನ ಕಾರ್ಪೊರೇಟ್ ಕಚೇರಿಯಲ್ಲಿ ಬಿಡುಗಡೆ ಮಾಡಿದರು. ನಾಗರಿಕ ಪಾಲುದಾರರು ನೀಡಿದ ಸಲಹೆಗಳು ಮತ್ತು ಮನವಿಗಳನ್ನು ತಾಳ್ಮೆಯಿಂದ ಆಲಿಸಿದ ಸಚಿವರು, "ಬಿ ಎಸ್ ಆರ್ ಪಿ ಒಂದು ಪಥ ಪರಿವರ್ತಕ (ಗೇಮ್ ಚೇಂಜರ್) ಮತ್ತು ಬೆಂಗಳೂರು ಮೇಲಿನ ಒತ್ತಡವನ್ನು ಕಡಿಮೆ ಮಾಡುವ ಸಾಮರ್ಥ್ಯವನ್ನು ಹೊಂದಿದೆ. ಯೋಜನೆಯಲ್ಲಿ ಹಲವಾರು ಮಧ್ಯಸ್ಥಗಾರರು ಭಾಗಿಯಾಗಿದ್ದಾರೆ ಮತ್ತು ಆದಷ್ಟು ಶೀಘ್ರ ಸವಾಲುಗಳನ್ನು ಪರಿಹರಿಸಲುಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ ಎಂದರು. ಬೆಂಗಳೂರಿನ ಭವಿಷ್ಯದ ಸಾರಿಗೆ ಅಗತ್ಯಗಳನ್ನು ಪೂರೈಸುವ ಸಾಮರ್ಥ್ಯವನ್ನು ಹೆಚ್ಚಿಸುವುದು ಯೋಜನೆಯ ಉದ್ದೇಶವಾಗಿದೆ". ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ, ಐಡಿಡಿ, ಮತ್ತು ಕ-ರೈಡ್‌ನ ಮಾಜಿ ವ್ಯವಸ್ಥಾಪಕ ನಿರ್ದೇಶಕ ಶ್ರೀ. ಗೌರವ್ ಗುಪ್ತಾ ಮತ್ತು ಕ-ರೈಡ್‌ನ ಇತರ ಹಿರಿಯ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು

## ವ್ಯವಸ್ಥಾಪಕ ನಿರ್ದೇಶಕರ ಆಶಯ ನುಡಿ



**ಡಾ॥ ಎನ್. ಮಂಜುಳ, ಭಾ.ಆ.ಸೇ**
ವ್ಯವಸ್ಥಾಪಕ ನಿರ್ದೇಶಕರು, ಕ-ರೈಡ್ ಹಾಗೂ ಕಾರ್ಯದರ್ಶಿ,
ಮೂಲಸೌಲಭ್ಯ ಅಭಿವೃದ್ಧಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ

ಬಿ ಎಸ್ ಅರ್ ಪಿ ಒಂದು ವಿಶ್ವಾಸಾರ್ಹ ಮತ್ತು ಸುಸ್ಥಿರ ಸಾರಿಗೆ ವಿಧಾನವನ್ನು ಒದಗಿಸುವ ಮತ್ತು ಬೆಂಗಳೂರು ನಗರದಲ್ಲಿ ವಾಯುಮಾಲಿನ್ಯ ಮತ್ತು ಸಂಚಾರ ದಟ್ಟಣೆಯನ್ನು ತಗ್ಗಿಸಲು ನೆರವಾಗುವ ಗುರಿಯನ್ನು ಹೊಂದಿರುವ ಬಹು-ನಿರೀಕ್ಷಿತ, ಬಹು-ಪಾಲುದಾರರ ಉಪಕ್ರಮವಾಗಿದೆ. ಬೆಂಗಳೂರು ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳ ಹೆಚ್ಚುತ್ತಿರುವ ಸಾರಿಗೆ ಅಗತ್ಯತೆಗಳನ್ನು ಪರಿಹರಿಸಲು ನಿರ್ದಿಷ್ಟ ಉಪನಗರ ರೈಲು ಜಾಲವನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ನಮ್ಮ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯ ಗೌರವಾನ್ವಿತ ಸಚಿವರು "ಬಿ ಎಸ್ ಅರ್ ಪಿ ಕರ್ನಾಟಕಕ್ಕೆ ಪಥ ಪರಿವರ್ತಕ (ಗೇಮ್ ಚೇಂಜರ್) ಆಗಲಿದೆ" ಎಂದು ಸದಾ ಹೇಳುತ್ತಿರುತ್ತಾರೆ. **ಬಿ ಎಸ್ ಅರ್ ಪಿ ಕೇವಲ ಸಾರಿಗೆ ಉಪಕ್ರಮವಲ್ಲ, ಆರ್ಥಿಕ ಅಭಿವೃದ್ಧಿ, ಸುಧಾರಿತ ಜೀವನ ಗುಣಮಟ್ಟ ಮತ್ತು ನಮ್ಮ ನಗರಕ್ಕೆ ಉಜ್ವಲ ಭವಿಷ್ಯಕ್ಕಾಗಿ ವೇಗವರ್ಧಕವಾಗಿದೆ.** ಕ-ರೈಡ್‌ನ ವ್ಯವಸ್ಥಾಪಕ ನಿರ್ದೇಶಕರಾಗಿ ಸೇವೆ ಸಲ್ಲಿಸುವುದು ನನಗೆ ದೊರೆತಿರುವ ಒಂದು ಸೌಭಾಗ್ಯ. ಬಿ ಎಸ್ ಆರ್ ಪಿ ಯ ಪ್ರಗತಿಯ ಕುರಿತು ಮಾತನಾಡುತ್ತಾ, ಈ ಉಪನಗರ ರೈಲು ಯೋಜನೆಯನ್ನು ಜಾರಿಗೊಳಿಸುವಲ್ಲಿ ಇತ್ತೀಚೆಗೆ ಗಮನಾರ್ಹ ಬೆಳವಣಿಗೆಗಳು ನಡೆದಿವೆ. ಕಾರಿಡಾರ್ 4 & 1 ಪರಿಷ್ಕೃತ ಜೋಡಣೆ ಯೋಜನೆಯನ್ನು ಅನುಮೋದನೆಗಾಗಿ ನೈರುತ್ಯ ರೈಲ್ವೆ ವಲಯಕ್ಕೆ ಸಲ್ಲಿಸಲಾಗಿದೆ. ಕಾರಿಡಾರ್-3 ಜೋಡಣೆ ಯೋಜನೆ ಅಂತಿಮ ಹಂತದಲ್ಲಿದೆ.

ಉಪನಗರ ರೈಲು ಯೋಜನೆಯ (ಬಿ ಎಸ್ ಆರ್ ಪಿ) ಸುಗಮ ಅನುಷ್ಠಾನ ಮತ್ತು ಜಾರಿಗೆ, ರೈಲ್ವೆ ಸಚಿವಾಲಯ, ಕರ್ನಾಟಕ ಸರ್ಕಾರ ಮತ್ತು ಕ-ರೈಡ್ ನಡುವೆ 2023ರ ನವೆಂಬರ್ ತಿಂಗಳಲ್ಲಿ ತ್ರಿಪಕ್ಷೀಯ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಕಳೆದ ವಾರವಷ್ಟೇ ಜರ್ಮನ್ ಬ್ಯಾಂಕ್, ಕೆ ಎಫ್ ಡಬ್ಲ್ಯೂನಿಂದ 500 ಮಿಲಿಯನ್ ಯುರೋ ಸಾಲದ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಕಾರಿಡಾರ್ 4ರ ಟೆಂಡರ್ ನೀಡಲಾಗಿದ್ದು, ಶೀಘ್ರದಲ್ಲೇ ಭೌತಿಕ ಕಾಮಗಾರಿ ಆರಂಭವಾಗಲಿದೆ. ನಮ್ಮ ಬದ್ಧತೆಯ ಎಂಜಿನಿಯರ್‌ಗಳು ಯೋಜನಕಾರರು ಮತ್ತು ನಿರ್ಮಾಣ ಕಾರ್ಮಿಕರ ತಂಡವು ನಿಗದಿತ ಗಡುವನ್ನು ಪೂರೈಸಲು ಮತ್ತು ಕಾಮಗಾರಿಗಳಲ್ಲಿ ಉನ್ನತ ಗುಣಮಟ್ಟವನ್ನು ಕಾಯ್ದುಕೊಳ್ಳಲು ದಣಿವರಿಯದೆ ಕೆಲಸ ಮಾಡುತ್ತಿದ್ದಾರೆ. ಕ-ರೈಡ್ ಸಂಚಾರ ದಟ್ಟಣೆಯನ್ನು ತಗ್ಗಿಸಲು ಮತ್ತು ಸುಸ್ಥಿರ ಸಾರಿಗೆಯನ್ನು ಉತ್ತೇಜಿಸುವ ಸಾಮರ್ಥ್ಯವನ್ನು ಹೊಂದಿದೆ ಎಂದು ನಾನು ನಂಬಿದ್ದೇನೆ. ನಾನು ಈ ಯೋಜನೆಯ ಭಾಗವಾಗಲು ಉತ್ಸುಕತೆ ಹೊಂದಿದ್ದೇನೆ ಮತ್ತು ಶೀಘ್ರದಲ್ಲೇ ಫಲಿತಾಂಶಗಳನ್ನು ಎದುರು ನೋಡುತ್ತಿದ್ದೇನೆ.

**ಎಲ್ಲರೂ ಒಗ್ಗೂಡಿ ಇದನ್ನು ಕಾರ್ಯಗತಗೊಳಿಸೋಣ !**

## ಹೆಸರಲ್ಲೇನಿದೆ ?

4 ಬಿಎಸ್‌ಆರ್‌ಪಿ ಕಾರಿಡಾರ್‌ಗಳಿಗೆ
4 ಪ್ರಾದೇಶಿಕ ಹೂವುಗಳ ಹೆಸರನ್ನು ಇಡಲಾಗಿದೆ


ಕಾರಿಡಾರ್ - 1
ಸಂಪಿಗೆ


ಕಾರಿಡಾರ್ - 2
ಮಲ್ಲಿಗೆ


ಕಾರಿಡಾರ್ - 3
ಪಾರಿಜಾತ


ಕಾರಿಡಾರ್ - 4
ಕನಕ

ಸಂ-ಪ-ರ್ಕ



# ಪೆರಿಸ್ಕೋಪ್

## ಒಂದು ವಿಶೇಷ ಸಂದರ್ಶನ

**ಡಾ|| ಎನ್. ಮಂಜುಳ, ಭಾ.ಆ.ಸೇ**

ವ್ಯವಸ್ಥಾಪಕ ನಿರ್ದೇಶಕರು, ಕ-ರೈಡ್ ಹಾಗೂ ಕಾರ್ಯದರ್ಶಿ,
ಮೂಲಸೌಲಭ್ಯ ಅಭಿವೃದ್ಧಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ

**ಬೆಂಗಳೂರು ಉಪನಗರ ರೈಲು ಯೋಜನೆಯು ನಗರದ ಸಾರಿಗೆ ಮೂಲಸೌಕರ್ಯವನ್ನು ಸುಧಾರಿಸುವ ಪ್ರಮುಖ ಉಪಕ್ರಮವಾಗಿದೆ. ಈ ಜಾಲವು ಬೆಂಗಳೂರನ್ನು ಅದರ ಉಪನಗರಗಳೊಂದಿಗೆ ಸಂಪರ್ಕಿಸುತ್ತದೆ. ನಗರದ ಪ್ರಯಾಣಿಕರ ರೈಲು ಜಾಲವನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ ಮತ್ತು ಇದು ನಗರದ ಉಪನಗರಗಳಿಗೆ ಪ್ರಯಾಣಿಸುವ ಪ್ರಯಾಣಿಕರಿಗೆ ವಿಶ್ವಾಸಾರ್ಹ, ದಕ್ಷ ಮತ್ತು ಕೈಗೆಟುಕುವ ಸಾರಿಗೆ ವಿಧಾನವನ್ನು ಒದಗಿಸುವ ಮೂಲಕ ಸಂಚಾರ ದಟ್ಟಣೆ ಸಮಸ್ಯೆ ನಿವಾರಣೆಗೆ ಸಹಾಯ ಮಾಡುತ್ತದೆ. ಬಿಎಸ್ ಆರ್ ಪಿ ಬೆಂಗಳೂರು ನಗರದಲ್ಲಿ ಪರಿಸರ ಸ್ನೇಹಿ ಮತ್ತು ಕಡಿಮೆ ವೆಚ್ಚದ ಮೆಟ್ರೋ ರೈಲು ಆಧಾರಿತ ಸಮೂಹ ಕ್ಷಿಪ್ರ ಸಾರಿಗೆ ವ್ಯವಸ್ಥೆಯನ್ನು ಒದಗಿಸುತ್ತದೆ.**

ಈ ಮಹತ್ವದ ಬಿ ಎಸ್ ಆರ್ ಪಿ ಯೋಜನೆಯನ್ನು ಇತ್ತೀಚೆಗೆ ಕರ್ನಾಟಕ ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ (ಲಿಮಿಟೆಡ್) ಕ-ರೈಡ್‌ನ ಉಸ್ತುವಾರಿ ಎಂಡಿ ಆಗಿ ನೇಮಕಗೊಂಡಿರುವ ಡಾ|| ಎನ್. ಮಂಜುಳಾ ಅವರು ಮುನ್ನಡೆಸುತ್ತಿದ್ದಾರೆ. ಬಿ ಎಸ್ ಆರ್ ಪಿ ಕುರಿತಂತೆ ಅವರ ದೂರದೃಷ್ಟಿ ಮತ್ತು ಆಲೋಚನೆಗಳನ್ನು ಅರ್ಥಮಾಡಿಕೊಳ್ಳಲು ಕ-ರೈಡ್ ನ ವ್ಯವಸ್ಥಾಪಕ ನಿರ್ದೇಶಕರಾದ ಡಾ|| ಎನ್. ಮಂಜುಳಾ ಅವರೊಂದಿಗಿನ ವಿಶೇಷ ಸಂದರ್ಶನದ ವಿವರಗಳನ್ನು ನಿಮಗಾಗಿ ಇಲ್ಲಿ ನೀಡಲಾಗಿದೆ.

**1. ಗೌರವಾನ್ವಿತ ಐಡಿಡಿ ಸಚಿವರಾದ ಡಾ|| ಎಂ.ಬಿ.ಪಾಟೀಲ್ ಅವರು ಇತ್ತೀಚೆಗೆ ನಾಗರಿಕ ಪಾಲುದಾರರೊಂದಿಗೆ ಸಂವಾದ ನಡೆಸುತ್ತಾ, "ಬಿ ಎಸ್ ಆರ್ ಪಿ ಕರ್ನಾಟಕ ರಾಜ್ಯದ ಪಥ ಪರಿವರ್ತಕ (ಗೇಮ್ ಚೇಂಜರ್ ) ಆಗಲಿದೆ" ಎಂದು ಹೇಳಿದ್ದಾರೆ. ಆ ಬಗ್ಗೆ ನಿಮ್ಮ ಅಭಿಪ್ರಾಯವೇನು?**

ಬೆಂಗಳೂರು ಉಪನಗರ ರೈಲು ಯೋಜನೆಯ ಉದ್ದೇಶವು ನಾಲ್ಕು ಕಾರಿಡಾರ್‌ಗಳ ಮೂಲಕ ಗ್ರಾಮೀಣ ಮತ್ತು ನಗರ ಪ್ರದೇಶಗಳು, ಕೇಂದ್ರ ಪ್ರದೇಶಗಳನ್ನು ಹೊರವಲಯಕ್ಕೆ ಸಂಪರ್ಕಿಸುವುದು. ನಿರ್ದಿಷ್ಟ ಉಪನಗರ ರೈಲ್ವೆ ವ್ಯವಸ್ಥೆಯನ್ನು ರಚಿಸುವ ಮೂಲಕ ಬೆಂಗಳೂರು ನಗರದಲ್ಲಿ ಸುರಕ್ಷಿತ, ಸುಲಭವಾಗಿ ಲಭ್ಯವಾಗುವ ಮತ್ತು ಆರಾಮದಾಯಕ ಸಾರ್ವಜನಿಕ ಸಾರಿಗೆಯನ್ನು ಒದಗಿಸುವ ಗುರಿಯನ್ನು ಹೊಂದಿದೆ. ಇದು ಸಂಚಾರ ದಟ್ಟಣೆಯನ್ನು ತಗ್ಗಿಸಲು, ವಾಯು ಗುಣಮಟ್ಟವನ್ನು ಸುಧಾರಿಸಲು ಮತ್ತು ನಗರದ ಇತರ ಪ್ರದೇಶಗಳಿಗೆ ಉತ್ತಮ ಸಂಪರ್ಕವನ್ನು ಒದಗಿಸಲು ನೆರವಾಗುತ್ತದೆ. ಇದು ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತದೆ, ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸುತ್ತದೆ, ನಾಗರಿಕರ ಜೀವನದ ಗುಣಮಟ್ಟವನ್ನು ಸುಧಾರಿಸುತ್ತದೆ ಮತ್ತು ಈ ಪ್ರದೇಶದಲ್ಲಿ ಧನಾತ್ಮಕ ಬದಲಾವಣೆಯನ್ನು ತರುತ್ತದೆ. ಮುಂದಿನ ಕೆಲವು ವರ್ಷಗಳಲ್ಲಿ 9.84 ಲಕ್ಷಕ್ಕೂ ಅಧಿಕ ಗ್ರಾಮೀಣ ಮತ್ತು ನಗರವಾಸಿಗಳು ಈ ಯೋಜನೆಯಿಂದ ಪ್ರಯೋಜನ ಪಡೆಯುವ ನಿರೀಕ್ಷೆಯಿದೆ. **ಬಿ ಎಸ್ ಆರ್ ಪಿ** ಕರ್ನಾಟಕ ರಾಜ್ಯದ ಪಥ ಪರಿವರ್ತಕ (ಗೇಮ್ ಚೇಂಜರ್) ಆಗಲಿದೆ ಎಂಬುದರಲ್ಲಿ ಸಂದೇಹವಿಲ್ಲ.

**2. ಬಿ ಎಸ್ ಆರ್ ಪಿಗಾಗಿ ಇತ್ತೀಚೆಗೆ ಕೆ ಎಫ್ ಡಬ್ಲ್ಯೂ ಅಭಿವೃದ್ಧಿ ಬ್ಯಾಂಕ್ ಜತೆ ತ್ರಿಪಕ್ಷೀಯ ಒಪ್ಪಂದ ಮಾಡಿಕೊಳ್ಳಲಾಗಿದೆ ಮತ್ತು ಸಾಲದ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಈ ಒಪ್ಪಂದ ಬಿ ಎಸ್ ಆರ್ ಪಿಗೆ ಹೇಗೆ ಪ್ರಯೋಜನವಾಗಲಿದೆ ? ಇದರ ಉದ್ದೇಶವೇನು?**

ತ್ರಿಪಕ್ಷೀಯ ಒಪ್ಪಂದವು ಬಿ ಎಸ್ ಆರ್ ಪಿ ಗೆ ಮಾತ್ರ ಮಹತ್ವದ ಮೈಲಿಗಲ್ಲಲ್ಲಾ, ಬೆಂಗಳೂರಿನಲ್ಲಿ ಉಪನಗರ ರೈಲಿನ ದೂರದೃಷ್ಟಿಯನ್ನು ಸಾಕಾರಗೊಳಿಸುವಲ್ಲಿ ಕರ್ನಾಟಕ ಸರ್ಕಾರ, ರೈಲ್ವೆ ಸಚಿವಾಲಯ ಮತ್ತು ಕ-ರೈಡ್‌ನ ಸಾಮೂಹಿಕ ಪ್ರಯತ್ನಗಳನ್ನು ಪ್ರದರ್ಶಿಸುವ ಕಾರ್ಯವಿಧಾನದ ಬೆಳವಣಿಗೆಯಾಗಿದೆ. ಮೂರು ಸಂಸ್ಥೆಗಳು ತಮ್ಮ ತಿಳುವಳಿಕೆಗಳು, ಬದ್ಧತೆಗಳು, ನಿಬಂಧನೆಗಳು, ಒಡಂಬಡಿಕೆಗಳು ಮತ್ತು ಅವುಗಳ ವಿವರಗಳನ್ನು ಮುಖಾಮುಖಿಯಾಗಿ ದಾಖಲಿಸಿರುವುದರಿಂದ ಈ ಒಪ್ಪಂದವು ಯೋಜನೆಯ ಪ್ರಗತಿಯ ಸುಗಮಗೊಳಿಸಲಿದೆ ಎಂದು ನಾನು ಹೇಳುತ್ತೇನೆ. ಇದು ನಿಗದಿತ ಸಮಯದ ಚೌಕಟ್ಟಿನೊಳಗೆ ಯೋಜನೆಯ ಜಾರಿಯನ್ನು ಖಾತ್ರಿಪಡಿಸುತ್ತದೆ ಮತ್ತು ವಿಳಂಬದ ಅಪಾಯ ತಗ್ಗಿಸುತ್ತದೆ. ಬಾಹ್ಯ ಸಾಲ ಪ್ರಕ್ರಿಯೆಗೆ ಈ ಒಪ್ಪಂದವು ನಿರ್ಣಾಯಕವಾಗಿತ್ತು. ಈ ಒಪ್ಪಂದಕ್ಕೆ ಸಹಿ ಹಾಕಿದ ಕೂಡಲೇ ನಾವು ಜರ್ಮನಿಯ ಕೆ ಎಫ್ ಡಬ್ಲ್ಯೂ ಬ್ಯಾಂಕ್‌ನೊಂದಿಗೆ 500 ಮಿಲಿಯನ್ ಯುರೋ ಸಾಲ ಒಪ್ಪಂದವನ್ನು ಕಾರ್ಯಗತಗೊಳಿಸುವಲ್ಲಿ ಯಶಸ್ವಿಯಾಗಿದ್ದೇವೆ. ಈ ನಿಧಿಯು ಕಾರಿಡಾರ್ 1 ಮತ್ತು 3 ಮತ್ತು ಬಿ ಎಸ್ ಅರ್ ಪಿ ಸಿಸ್ಟಮ್ಸ್ ಟೆಂಡರ್‌ಗಳನ್ನು ಸಾಕಾರವಾಗಲು ನೆರವಾಗುತ್ತದೆ.

**3. ಬಿ ಎಸ್ ಆರ್ ಪಿ ಯಲ್ಲಿ ನೀವು ಯಾವ ಪ್ರಮುಖ ಸವಾಲುಗಳನ್ನು, ವಿಚಾರಗಳನ್ನು ಎದುರು ನೀಡುತ್ತಿದ್ದೀರಿ ?**

ಬಿ ಎಸ್ ಆರ್ ಪಿ ಎನ್ನುವುದು ಸರ್ಕಾರಿ ಏಜೆನ್ಸಿಗಳು- ಕೇಂದ್ರ, ರಾಜ್ಯ ಮತ್ತು ಸ್ಥಳೀಯ ಸರ್ಕಾರಗಳು, ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಗಳು, ಬೆಸ್ಕಾಂ, ಕೆ.ಪಿ.ಟಿ.ಸಿ.ಎಲ್, ಬಿ.ಡಬ್ಲ್ಯೂ.ಎಸ್.ಎಸ್.ಬಿ ಮತ್ತು ನಾಗರಿಕ ಗುಂಪುಗಳಂತಹ ಸಂಸ್ಥೆಗಳನ್ನು ಒಳಗೊಂಡಂತೆ ಹಲವು ಪಾಲುದಾರ ಸಂಸ್ಥೆಗಳು ಒಳಗೊಂಡ ಯೋಜನೆಯಾಗಿದೆ. ಈ ಗುಂಪುಗಳ ನಡುವೆ ಪರಿಣಾಮಕಾರಿ ಸಮನ್ವಯ ಮತ್ತು ಸಂವಹನವನ್ನು ಖಾತ್ರಿಪಡಿಸಿಕೊಳ್ಳುವುದು ಒಂದು ಮಹತ್ವದ ಸವಾಲಾಗಿದೆ. ಪ್ರಗತಿಯ ಬಗ್ಗೆ ನಿಗಾ ಇಡಲು ಮತ್ತು ಯಾವುದೇ ಬಗೆಯ ಅಡಚಣೆಗಳನ್ನು ನಿವಾರಿಸಲು ನಿಯಮಿತ ಸಭೆಗಳು, ಪರಿಶೀಲನಾ ಸಭೆಗಳನ್ನು ನಡೆಸಬೇಕು. ಒಮ್ಮೆ ಭೂಮಿ ವರ್ಗಾವಣೆಯಾದರೆ, ಹಣಕಾಸು, ಉನ್ನತ ಅಧಿಕಾರಿಗಳೊಂದಿಗೆ ಇತರ ಅನುಮೋದನೆಗಳನ್ನು ಅಂತಿಮಗೊಳಿಸಿದರೆ ಆನಂತರ ಅಗತ್ಯ ತಂಡದ ಮೇಲ್ವಿಚಾರಣೆಯೊಂದಿಗೆ ಯೋಜನೆಯು ಪ್ರಗತಿ ಸಾಧಿಸಬಹುದು.

**4. ಇತರೆ ಸಂಚಾರ ಯೋಜನೆಗಳಿಗೆ ಹೋಲಿಸಿದರೆ ಬಿಎಸ್‌ಆರ್‌ಪಿ ಎಷ್ಟು ಭಿನ್ನವಾಗಿರುತ್ತದೆ -? ಬಿ ಎಸ್ ಆರ್ ಪಿಯಲ್ಲಿ ಪ್ರಮುಖ ಆವಿಷ್ಕಾರಗಳು/ಸುಧಾರಿತ ತಂತ್ರಜ್ಞಾನಗಳನ್ನು ನಿಯೋಜಿಸಲಾಗಿದೆಯೇ ?**

ಬಿ ಎಸ್ ಆರ್ ಪಿ ಭಾರತ ಸರ್ಕಾರದ ಹೊಸ ರಾಷ್ಟ್ರೀಯಾ ಉಪನಗರ ನೀತಿ 2018ರಡಿಯಲ್ಲಿ ಮಂಜೂರಾದ ಮೊದಲ ಯೋಜನೆಯಾಗಿದೆ. ಇತರ ವಿಷಯಗಳ ಜೊತೆಗೆ, ಡಿಪಿಆರ್ ಮಂಜೂರಾತಿಯು **ಸಂವಹನ ಆಧಾರಿತ ರೈಲು ನಿಯಂತ್ರಣ (ಸಿಬಿಟಿಸಿ)** ಎಂದು ಕರೆಯಲ್ಪಡುವ ಅತ್ಯಂತ ವಿಶ್ವಾಸಾರ್ಹ ಸಿಗ್ನಲಿಂಗ್ ವ್ಯವಸ್ಥೆಯಲ್ಲಿ ರೈಲು ಕಾರ್ಯಾಚರಣೆಗಳನ್ನು ಒದಗಿಸುತ್ತದೆ. ಎಲ್ಲಾ ಸಿಬಿಟಿಸಿ ವ್ಯವಸ್ಥೆಯು **ಸ್ವಯಂಚಾಲಿತ ರೈಲು ರಕ್ಷಣೆ (ಎಟಿಪಿ)** ವ್ಯವಸ್ಥೆಯನ್ನು ಹೊಂದಿದ್ದು, ಪ್ರಯಾಣಿಕರ ಸುರಕ್ಷತೆಯನ್ನು ಖಾತ್ರಿಪಡಿಸಿಕೊಳ್ಳಲು ಮತ್ತು ಅಪಘಾತಗಳನ್ನು ತಡೆಗಟ್ಟಲು ಬಿಎಸ್‌ಆರ್‌ಪಿ ರೈಲುಗಳಲ್ಲಿ ಅಳವಡಿಸಲಾಗಿರುವ ಸುರಕ್ಷತಾ ಕ್ರಮವಾಗಿದೆ. ಇದು ರೈಲಿನ ಸ್ಥಳ ಮತ್ತು ವೇಗವನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡುವ ಮೂಲಕ ಕಾರ್ಯನಿರ್ವಹಿಸುತ್ತದೆ ಮತ್ತು ಮುಖಾಮುಖಿ ಅಥವಾ ಇತರ ಅಪಾಯಗಳನ್ನು ತಪ್ಪಿಸಲು ಅಗತ್ಯವಿದ್ದರೆ ಸ್ವಯಂಚಾಲಿತವಾಗಿ ಬ್ರೇಕ್ಗಳನ್ನು ಅನ್ವಯಿಸುತ್ತದೆ. ಸಿಬಿಟಿಸಿ ವ್ಯವಸ್ಥೆಯು ಮೂರು ಪ್ರಮುಖ ಅಂಶಗಳ ಮೇಲೆ ಕಾರ್ಯನಿರ್ವಹಿಸುತ್ತದೆ, ಅದೆಂದರೆ

* **ಎಟಿಪಿ (ಸ್ವಯಂ ರೈಲು ರಕ್ಷಣೆ)**, ಎಸ್ ಐಎಲ್ (ಸಮಗ್ರ ಸುರಕ್ಷತೆಯ ಮಟ್ಟ) -4 ಖಾತ್ರಿಪಡಿಸಲು ವೇಗದ ನಿಯಂತ್ರಣ, ಬ್ರೇಕ್ ಹಾಕುವುದು ಮತ್ತು ಎಲ್ಲ ಬಗೆಯ ಸಂದರ್ಭಗಳಲ್ಲಿ ನಿಲುಗಡೆ ಮಾಡುವುದಕ್ಕೆ ರೈಲುಗಳ ಸುರಕ್ಷಿತ ಕಾರ್ಯಾಚರಣೆ ವಿಫಲವಾದಾಗ ಕೆಲಸ ಮಾಡುತ್ತಿದೆ.
* **ಎಟಿಒ (ಸ್ವಯಂಚಾಲಿತ ರೈಲು ಕಾರ್ಯಾಚರಣೆ)**. ರೈಲು ನಿರ್ವಾಹಕರು ಮತ್ತು ಲೊಕೊ ಪೈಲೆಟ್‌ಗಳನ್ನು ವೇಗ ನಿಯಂತ್ರಣ, ಕೋಸ್ಟಿಂಗ್ ಮತ್ತು ಪ್ರಯಾಣದ ಉದ್ದಕ್ಕೂ ರೈಲುಗಳಲ್ಲಿ ವಾಸ ಮತ್ತು
* **ಎಟಿಎಸ್ (ಸ್ವಯಂಚಾಲಿತ ರೈಲು ಮೇಲ್ವಿಚಾರಣೆ)** ಮೂಲಕ ಬೆಂಬಲಿಸಲು, ಪ್ರಯಾಣಿಕರ ದಟ್ಟಣೆಗೆ ಅನುಗುಣವಾಗಿ ರೈಲು ವೇಳಾಪಟ್ಟಿಗಳನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡಲು ಮತ್ತು ನಿಯಂತ್ರಿಸಲಾಗುವುದು. ರೈಲ್ವೆ ಕಾರ್ಯಾಚರಣೆಗಳು ಮತ್ತು ಸೇವಾ ವಿಶ್ವಾಸಾರ್ಹತೆಯನ್ನು ಉತ್ತಮಗೊಳಿಸಲು ನಿರಂತರ ಪ್ರಯತ್ನ ನಡೆಸಲಾಗುತ್ತಿದೆ.

**ಒಟ್ಟಾರೆ ಸಿಬಿಟಿಸಿ ತಂತ್ರಜ್ಞಾನವನ್ನು ಹೊಂದಿದ ಬಿ ಎಸ್ ಆರ್ ಪಿ ರೈಲುಗಳು ರೈಲ್ವೆ ಪ್ರಯಾಣವನ್ನು ಹೆಚ್ಚು ಆರಾಮದಾಯಕಗೊಳಿಸಿ ಸಮಯವನ್ನು ಉಳಿಸುತ್ತದೆ ಮತ್ತು ಒತ್ತಡದ ಮಟ್ಟವನ್ನು ತಗ್ಗಿಸುತ್ತದೆ. ಆಧುನಿಕ ಕೋಚ್‌ಗಳು ಮತ್ತು ಹವಾನಿಯಂತ್ರಣ ಮತ್ತು ವೈಫೈ ಆನ್‌ಬೋರ್ಡ್‌ನಂತಹ ಸೌಕರ್ಯಗಳ ಪರಿಚಯವು ಪ್ರಯಾಣಿಕರಿಗೆ ಹೆಚ್ಚಿನ ಸೌಕರ್ಯವನ್ನು ಒದಗಿಸುತ್ತದೆ.**

**5. ಇತ್ತೀಚೆಗೆ ರೈಲ್ವೆ ಸಚಿವರಾದ ಶ್ರೀ ಅಶ್ವಿನಿ ವೈಷ್ಣವ್ ಅವರು ಬಿ ಎಸ್ ಆರ್ ಪಿ ಕುರಿತಂತೆ ನಡೆಸಿದ ಪ್ರಗತಿ ಪರಿಶೀಲನಾ ಸಭೆ ಮತ್ತು ತಪಾಸಣೆಯ ಸಂದರ್ಭದಲ್ಲಿನ ಪ್ರಮುಖ ವಿಶ್ಲೇಷಣೆ ಹಾಗೂ ಪ್ರಮುಖಾಂಶಗಳನೇ?**

ಬೆಂಗಳೂರು ಉಪನಗರ ರೈಲು ಯೋಜನೆಯು ಬೆಂಗಳೂರಿಗೆ ಅತ್ಯಂತ ನಿರ್ಣಾಯಕ ಯೋಜನೆಯಾಗಿದೆ ಎಂದು ಮಾನ್ಯ ಸಚಿವರು ಪ್ರಮುಖವಾಗಿ ಪ್ರಸ್ತಾಪಿಸಿದರು. ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ನಾವು ಏನು ಮಾಡಬೇಕಿದ್ದರೂ, ಅದಕ್ಕೆ ಸಂಪೂರ್ಣ ಒತ್ತು ಮತ್ತು ಸಂಪೂರ್ಣ ಗಮನ ಹರಿಸಬೇಕಾಗಿದೆ ಎಂದು ಹೇಳಿದರು. 148 ಕಿಮೀ ಬಿ ಎಸ್ ಆರ್ ಪಿ ಅನುಷ್ಠಾನಕ್ಕೆ ನೋಡಲ್ ಏಜೆನ್ಸಿಯಾದ ಕ-ರೈಡ್‌ಗೆ ತಾಂತ್ರಿಕ ನೆರವು ನೀಡುವಂತೆ ನೈರುತ್ಯ ರೈಲ್ವೆಗೆ ಅವರು ಸೂಚನೆ ನೀಡಿದರು. ಈ ಯೋಜನೆಯು ಉತ್ತಮ ಯಶಸ್ಸನ್ನು ಸಾಧಿಸುತ್ತದೆ ಮತ್ತು ಬೆಂಗಳೂರಿನ ಜನರಿಗೆ ಪ್ರಯೋಜನವನ್ನು ನೀಡುತ್ತದೆ ಮತ್ತು ಅದನ್ನು ಸಕಾಲದಲ್ಲಿ ಪೂರ್ಣಗೊಳಿಸಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ಅವರು ಭರವಸೆ ನೀಡಿದರು.

ಕ–ರೈಡ್
K RIDE

# ನಿಮ್ಮ ಬಿ ಎಸ್ ಆರ್ ಪಿ ಬಗ್ಗೆ ತಿಳಿಯಿರಿ

## ಅಲೈನ್‌ಮೆಂಟ್ (ಜೋಡಣೆ )

ಎಲ್ಲರಿಗೂ ಸಂಪರ್ಕ ಕಲ್ಪಿಸಲು ಒಂದು ಉಪನಗರ ರೈಲು

### ಬಿ ಎಸ್ ಆರ್ ಪಿ ಯ ಬಹು ಮಾದರಿ ಜೋಡಣೆ (ಎಂಎಂಐ) ಮತ್ತು ಟ್ರಾನ್ಸಿಟ್ ಅಧಾರಿತ ಅಭಿವೃದ್ಧಿ (ಟಿಓಡಿ) ಯೋಜನೆಗಳು:

ಈ ಉಪನಗರ ರೈಲು ಜಾಲವು ಪ್ರಯಾಣಿಕರಿಗೆ ಇತರ ಸಾರಿಗೆ ವಿಧಾನಗಳೊಂದಿಗೆ ಉತ್ತಮ ಸಂಚಾರ ಮತ್ತು ಪ್ರಯಾಣದ ಸಮಯವನ್ನು ಕಡಿಮೆ ಮಾಡಲು ಪರಸ್ಪರ ಇಂಟರ್ ಚೇಂಜಿಂಗ್ (ಮಾರ್ಗ ಬದಲಾವಣೆ)ಯ ಸೌಲಭ್ಯದ ಗುರಿಯನ್ನು ಹೊಂದಿದೆ. ಹೆಚ್ಚಿನ ಸಂಖ್ಯೆಯ ನಾಗರಿಕರು ಸಮೂಹ ಸಾರಿಗೆ ಮೂಲಸೌಕರ್ಯದಿಂದ ಪ್ರಯೋಜನ ಪಡೆಯುವ ಅಗತ್ಯ ಪರಿಸರ ವ್ಯವಸ್ಥೆಯನ್ನು ರಚಿಸಲು ಮತ್ತು ವ್ಯವಸ್ಥೆಯಲ್ಲಿ ಸಂಚಾರ ಕೈಗೊಳ್ಳುವವರನ್ನು ಹೆಚ್ಚಿಸುವ ಮೂಲಕ, ಕ–ರೈಡ್ ಮಾರ್ಗಗಳ ಏಕೀಕರಣ, ಭೌತಿಕ ಏಕೀಕರಣ, ಮೂಲಸೌಕರ್ಯ ಏಕೀಕರಣ ಮತ್ತು ಸಾಂಸ್ಥಿಕ ಏಕೀಕರಣದ ನಿಟ್ಟಿನಲ್ಲಿ ಹಲವು ಕ್ರಮಗಳನ್ನು ಕೈಗೊಂಡಿದೆ. ಹಾಗಾಗಿ, ಟಿಒಡಿ ಮತ್ತು ಎಂಎಂಐ ದೃಷ್ಟಿಯಿಂದ, ಕ–ರೈಡ್ ನಿಲ್ದಾಣದ ಏಕೀಕರಣ ಮತ್ತು ಬಿ ಎಸ್ ಆರ್ ಪಿ ಮತ್ತು ಬಿಎಂಆರ್ ಸಿಎಲ್, ಡಿ ಯು ಎಲ್ ಟಿ ಮತ್ತು ಇತರ ಪಾಲುದಾರರ ನಡುವಿನ ಸಹಯೋಗದ ಮೂಲಕ ಬೆಂಗಳೂರಿನಲ್ಲಿ ಸಮೂಹ ಸಾರಿಗೆ ವಿಧಾನದ ಪಾಲನ್ನು ಹೆಚ್ಚಿಸುವ ಮಾರ್ಗಗಳನ್ನು ಪರಿಶೀಲಿಸುತ್ತಿದೆ.

### ಬಿ ಎಸ್ ಆರ್ ಪಿ ಯ ಹಸಿರು ಕಟ್ಟಡ ಪರಿಕಲ್ಪನೆ:

- ಕ–ರೈಡ್ ನ ಬೆಂಗಳೂರು ಉಪನಗರ ರೈಲ್ವೆ ಯೋಜನೆಯಲ್ಲಿ ಹಸಿರು ಕಟ್ಟಡ ಪರಿಕಲ್ಪನೆಯನ್ನು ರಚನಾತ್ಮಕ ವಿನ್ಯಾಸ ಮತ್ತು ಇಂಧನ ಮತ್ತು ನೀರಿನ ಉತ್ತಮ ಉಳಿತಾಯ ಮತ್ತು ಇಂಗಾಲದ ಹೊರಸೂಸುವಿಕೆಯಲ್ಲಿ ಕಡಿತ ವಿಷಯದಲ್ಲಿ ಅಳವಡಿಸಲಾಗಿದೆ.
- ಬಿ ಎಸ್ ಆರ್ ಪಿ ಭಾರತೀಯ ಗ್ರೀನ್ ಬಿಲ್ಡಿಂಗ್ ಕೌನ್ಸಿಲ್, ಐಜಿಬಿಸಿಯ ಸ್ಥಾಪಕ ಸದಸ್ಯ.
- ಬಿ ಎಸ್ ಆರ್ ಪಿ ಉಪನಗರ ನಿಲ್ದಾಣದ ಕಟ್ಟಡಗಳನ್ನು ಸೂಪರ್ ಇಸಿಬಿಸಿ (ಇಂಧನ ಸಂರಕ್ಷಣೆ ಕಟ್ಟಡ ಸಂಹಿತೆ) ಪಾಲಿಸಿ ವಿನ್ಯಾಸಗೊಳಿಸುವ ಮತ್ತು ಅಭಿವೃದ್ಧಿಪಡಿಸುವ ಮೂಲಕ ಇಂಧನದ ಬೇಡಿಕೆ ತಗ್ಗಿಸುವ ಗುರಿಯನ್ನು ಹೊಂದಿದೆ, ಇದು ಇಸಿಬಿಸಿ ಪಾಲನೆಗೆ ಪ್ರತಿಯಾಗಿ ಶೇ. 30–40 ಅಧಿಕ ವಿದ್ಯುತ್ ಉಳಿತಾಯ ಸಾಧಿಸುವ ಮೂಲಕ ಶೂನ್ಯ ಗುರಿಯ ಸಮೀಪದಲ್ಲಿದೆ.
- ಇಂಡಿಯನ್ ಗ್ರೀನ್ ಬಿಲ್ಡಿಂಗ್ ಕೌನ್ಸಿಲ್ (ಐಜಿಬಿಸಿ)/ಸಮಾನ ಮಾನದಂಡಗಳ ಪ್ರಕಾರ, ಬಿಎಸ್ ಆರ್ ಪಿ ನಿಲ್ದಾಣಗಳು / ಡಿಪೋಗಳನ್ನು ಎಲ್ಲಾ ಸಂಭಾವ್ಯ ವಿದ್ಯುತ್ /ಸಂಪನ್ಮೂಲ ದಕ್ಷ ಕ್ರಮಗಳೊಂದಿಗೆ ವಿನ್ಯಾಸಗೊಳಿಸಲು ಮತ್ತು ನಿರ್ಮಿಸಲು ಪ್ರಸ್ತಾಪಿಸಲಾಗಿದೆ.
- ಎಲ್ಲಾ ನಿಲ್ದಾಣದ ಆವರಣದಲ್ಲಿ ವಿದ್ಯುತ್ ವಾಹನಗಳ (ಎಲೆಕ್ಟ್ರಿಕ್ ವೆಹಿಕಲ್) ಚಾರ್ಜಿಂಗ್ ಮೂಲಸೌಕರ್ಯ ಸ್ಥಾಪನೆಯನ್ನು ಒದಗಿಸುವುದು.

### ನವೀನ ವಿಧಾನ:

ಹಾಲಿ ಇರುವ ರಸ್ತೆ ಮಟ್ಟವನ್ನು ಬದಲಾಯಿಸದೆ ಭಾರತೀಯ ರೈಲ್ವೆ ಹಳಿಯನ್ನು ಎತ್ತರಿಸುವ ಮೂಲಕ ಲೆವೆಲ್ ಕ್ರಾಸಿಂಗ್‌ಗಳನ್ನು ತೆಗೆದುಹಾಕಲಾಗುವುದು. ಈ ವಿಧಾನದೊಂದಿಗೆ ದಟ್ಟಣೆಯ ನಗರ ಪ್ರದೇಶಗಳಲ್ಲಿ ಬಿ ಎಸ್ ಆರ್ ಪಿಯ ಒಟ್ಟು 10 ಲೆವೆಲ್ ಕ್ರಾಸಿಂಗ್‌ಗಳನ್ನು ತೆಗೆದುಹಾಕಲಾಗುತ್ತಿದೆ. ಅದೇ ತಂತ್ರಜ್ಞಾನ ಅಳವಡಿಸಿಕೊಳ್ಳುವ ಮೂಲಕ ಭೂಸ್ವಾಧೀನ ತಪ್ಪಿಸಲಾಗುವುದು ಮತ್ತು ನೀರು ನಿಲ್ಲುವ ಸಮಸ್ಯೆ ನಿವಾರಣೆಯಾಗುತ್ತದೆ.

### ಬೆನ್ನಿಗಾನಹಳ್ಳಿಯಲ್ಲಿ ಉಪನಗರ ರೈಲು ಮತ್ತು ಮೆಟ್ರೊ ರೈಲು ನಡುವೆ 0.50 ಕಿಮೀ ಹಂಚಿಕೆಯ ಜೋಡಣೆ:

ಈ ಪ್ರಸ್ತಾವನೆಯು ಹಾಲಿ ಇರುವ ಬಿ.ಎಂ.ಆರ್.ಸಿ.ಎಲ್ ನ ಜೋಡಣೆ ಅಥವಾ ಮಾರ್ಗಗಳಲ್ಲಿನ ಮಟ್ಟದಲ್ಲಿ ಯಾವುದೇ ಬದಲಾವಣೆಯನ್ನು ಒಳಗೊಂಡಿಲ್ಲ. ಬಿ ಎಸ್ ಆರ್ ಪಿಯ ಪ್ರಸ್ತಾವನೆಯನ್ನು ಅದಕ್ಕೆ ತಕ್ಕಂತೆ ಮಾರ್ಪಡಿಸಲಾಗಿದೆ. ಈ ಉನ್ನತ ವರ್ಗದವರು ವಾಸಿಸುವ ಪ್ರದೇಶದಲ್ಲಿ ಆಸ್ತಿಯ ದುಬಾರಿ ದರ ಮತ್ತು ಭೂ ಸ್ವಾಧೀನ ಸಂಕೀರ್ಣತೆಯನ್ನು ತಪ್ಪಿಸಲು ಮಾತ್ರ ಈ ಪ್ರಸ್ತಾಪವನ್ನು ಮಾಡಲಾಗಿದೆ.



#### 10 ಲೆವೆಲ್ ಕ್ರಾಸಿಂಗ್ ನಿರ್ಮೂಲನೆ

ಅಸ್ತಿತ್ವದಲ್ಲಿರುವ ರಸ್ತೆ ಮಟ್ಟವನ್ನು ಬದಲಾಯಿಸದೆಯೇ ರೈಲ್ವೆ ಮತ್ತು ಉಪನಗರ ಹಳಿಗಳೆರಡನ್ನೂ ಎತ್ತರಿಸುವುದು

| | | |
|---|---|---|
| 16 ಎಕರೆ ಭೂಸ್ವಾಧೀನ ತಪ್ಪಿಸಲಾಗಿದೆ | ನೀರಿನ ನಿಶ್ಚಲತೆಯ ಸಮಸ್ಯೆಗಳನ್ನು ನಿವಾರಿಸಲಾಗಿದೆ | ₹130 ಕೋಟಿ ಉಳಿತಾಯ ಮಾಡಿದೆ. |

ಜನನಿಬಿಡ ನಗರ ಪ್ರದೇಶಗಳಲ್ಲಿ ಒಟ್ಟು 23 ಲೆವೆಲ್ ಕ್ರಾಸಿಂಗ್‌ಗಳನ್ನು ತೆಗೆದುಹಾಕಲಾಗಿದೆ



#### ಉಪನಗರ ರೈಲು ಮತ್ತು ಮೆಟ್ರೋ ರೈಲು 0.50 ಕಿಮೀ ನಡುವೆ ಹಂಚಿಕೆಯ ಜೋಡಣೆ

| | | |
|---|---|---|
| 1.65 ಎಕರೆ ಭೂಸ್ವಾಧೀನ ತಪ್ಪಿಸಲಾಗಿದೆ | 600 ಜನರ ಸ್ಥಳಾಂತರ ತಪ್ಪಿಸಲಾಗಿದೆ | ₹169 ಕೋಟಿ ಉಳಿತಾಯ ಮಾಡಿದೆ. |

2 ಎಂ ಆರ್ ಟಿ ಸಿಸ್ಟಮ್ಸ್ ( ಬಿಎಂಆರ್‌ಸಿಎಲ್, ಬಿ ಎಸ್ ಆರ್ ಪಿ)
2 ಎಲೆಕ್ಟ್ರಿಕಲ್ ಸಿಸ್ಟಮ್ಸ್ (ಎಸಿ, ಡಿಸಿ)
ಒಂದೇ ಕಾರಿಡಾರ್



ಯಲಹಂಕದಲ್ಲಿ 1.2 ಕಿಮೀ ಕಾರಿಡಾರ್
1&4 ಒಟ್ಟಿಗೆ ಚಲಿಸುತ್ತದೆ.

#### ರೈಲ್ ಓವರ್ ರೈಲ್

ಒಂದೇ ಪಿಯರ್ / ಪೋರ್ಟಲ್ ರಚನೆಯಲ್ಲಿ

| | | |
|---|---|---|
| 2.92 ಎಕರೆ ಭೂಸ್ವಾಧೀನ ತಪ್ಪಿಸಲಾಗಿದೆ | 180 ಜನರ ಸ್ಥಳಾಂತರ ತಪ್ಪಿಸಲಾಗಿದೆ | ₹ 93 ಕೋಟಿ ಉಳಿತಾಯ ಮಾಡಿದೆ |

## ಬಿ ಎಸ್ ಆರ್ ಪಿ: ರೈಲ್ವೆ ಬೋಗಿಗಳ ಖರೀದಿಗೆ ಬಿಡ್ ಕರೆದ ಕ–ರೈಡ್

ಬೆಂಗಳೂರು ಉಪನಗರ ರೈಲು ಯೋಜನೆಗೆ ರೈಲ್ವೆ ಬೋಗಿಗಳನ್ನು (ರೋಲಿಂಗ್ ಸ್ಟಾಕ್)ಗಳನ್ನು ಖರೀದಿಸಲು ಕ–ರೈಡ್ ಟೆಂಡರ್ ಪಿಪಿಪಿ (ಸಾರ್ವಜನಿಕ ಖಾಸಗಿ ಸಹಭಾಗಿತ್ವ) ಮಾದರಿಯಲ್ಲಿ ಟೆಂಡರ್ (ಆರ್ ಎಫ್ ಕ್ಯೂ)ಅನ್ನು 08/06/2023ರಂದು ಆಹ್ವಾನಿಸಿದೆ. ತಾಂತ್ರಿಕ ಅರ್ಹತೆಯ ವ್ಯಾಖ್ಯಾನ ಆಧರಿಸಿ 3 ಬಿಡ್ಡರ್ ಗಳು (ಸಿಎಫ್, ಬಿ.ಎಚ್.ಇ.ಎಲ್ ಮತ್ತು ಬಿಇಎಂಎಲ್) ಇವುಗಳು ಹಣಕಾಸು ಬಿಡ್(ಆರ್ ಎಫ್ ಪಿ)ಗೆ ಅರ್ಹತೆ ಪಡೆದಿವೆ.

- ಅಲ್ಲದೆ ಕ–ರೈಡ್ ಹಣಕಾಸು ಬಿಡ್ ಎಂದು ಕರೆಯಲ್ಪಡುವ ರಿಕ್ವೆಸ್ಟ್ ಫಾರ್ ಪ್ರಪೋಸಲ್ (ಆರ್ ಎಫ್ ಪಿ) ಅನ್ನು ಎರಡನೇ ಹಂತದ ಟೆಂಡರ್ ಅನ್ನು 30.12.2023 ರಂದು ಕರೆದಿತ್ತು. ಹಣಕಾಸು ಪ್ರಸ್ತಾವಗಳನ್ನು ಆಧರಿಸಿ, ಅತಿ ಕಡಿಮೆ ಬಿಡ್ ನಮೂದಿಸಿದ್ದವರಿಗೆ ಬಿ ಎಸ್ ಆರ್ ಪಿ ರೈಲುಗಳನ್ನು ಪೂರೈಸಲು, ಕಾರ್ಯಾಚರಣೆ ನಡೆಸಲು ಮತ್ತು ನಿರ್ವಹಿಸಲು ಟೆಂಡರ್ ನೀಡಲಾಯಿತು.
- ಈ ಟೆಂಡರ್ ಅನ್ನು ಮೊದಲೇ ಅರ್ಹತೆ ಪಡೆದಿದ್ದ ಬಿಡ್ಡರ್ ಗಳಿಗೆ 27.02.2023ರ ವರೆಗೆ ಅವಕಾಶ ನೀಡಲಾಗಿತ್ತು ಮತ್ತು ನಂತರ ಅದನ್ನು 28.02.2023ರಂದು ತೆರೆಯಲಾಯಿತು.
- ಗುತ್ತಿಗೆ ಮಾದರಿಯಲ್ಲಿ ರೈಲ್ವೆ ಬೋಗಿಗಳ ಖರೀದಿಗೆ ಅವಕಾಶ ನೀಡಲಾಗಿದ್ದು, ಅವುಗಳಲ್ಲಿ ರೈಲ್ವೆ ಕಾರ್ಯಾಚರಣೆ ಹಾಗೂ ಅವುಗಳ ನಿರ್ವಹಣೆ ಅಂಶಗಳು ಸಹ ಸೇರಿವೆ. ಈ ಉದ್ದೇಶಕ್ಕೆ ಕ–ರೈಡ್ ಪ್ರತಿ ತಿಂಗಳು ರೈಲುಗಳ ಲಭ್ಯತೆ ಆಧರಿಸಿ ಗುತ್ತಿಗೆ ಶುಲ್ಕವನ್ನು ಪಾವತಿಸುತ್ತದೆ.

**ಖರೀದಿ ಪ್ರಕ್ರಿಯೆ ಟೆಂಡರ್ ಸಿದ್ಧತೆಗಾಗಿ ಈ ಕೆಳಗಿನ ಪ್ರಮುಖ ನೀತಿಗಳನ್ನು ಪರಿಗಣಿಸಲಾಯಿತು.**

1. **ಮೇಕ್ ಇನ್ ಇಂಡಿಯಾ** – ಅದರಲ್ಲಿ ಶೇ. 75ರಷ್ಟು ರೈಲುಗಳು ಕಡ್ಡಾಯವಾಗಿ ಭಾರತದಲ್ಲೇ ತಯಾರಿಸಿದವುಗಳಾಗಿರಬೇಕು.
2. **ಸಾಮಾನ್ಯ ಹಣಕಾಸು ನಿಯಮ 2017ರ ನಿಯಮ 144(xi) ರಡಿ ನಿರ್ಬಂಧಗಳು** – ಜಿಎಫ್‌ಆರ್ ಆದೇಶದಂತೆ ದೇಶದ ಯಾವುದೇ ಬಿಡ್ಡರ್/ಅರ್ಜಿದಾರರು ಭಾರತದೊಂದಿಗೆ ಗಡಿ ಹಂಚಿಕೊಂಡಿರುವವರು(ಜಿಎಫ್ ಆರ್ ಆದೇಶದಲ್ಲಿ ವ್ಯಾಖ್ಯಾನಿಸಿರುವಂತೆ) ಜಿಎಫ್ ಆರ್ ನಲ್ಲಿ ನಮೂದಿಸಿರುವಂತೆ ಸಕ್ಷಮ ಪ್ರಾಧಿಕಾರದಲ್ಲಿ ನೋಂದಾಯಿಸಿಕೊಂಡ ಬಿಡ್ಡರ್/ಅರ್ಜಿದಾರರಾಗಿದ್ದರೆ ಮಾತ್ರ ಟೆಂಡರ್ ಪ್ರಕ್ರಿಯೆಗೆ ಅರ್ಹರಾಗುತ್ತಾರೆ.
3. **ವಂಚನೆ ಮತ್ತು ಭ್ರಷ್ಟ ಪದ್ಧತಿಗಳ ಮಾರ್ಗಸೂಚಿ** – ಇದು ಅರ್ಜಿದಾರರಿಗೆ ಮತ್ತು ಪ್ರಾಧಿಕಾರಕ್ಕೆ ಹಾಗೂ ಏಜೆಂಟ್ ಗಳಿಗೆ ಮತ್ತು ಸಲಹೆಗಾರರಿಗೆ ಬಿಡ್ಡಿಂಗ್ ಪ್ರಕ್ರಿಯೆಯಲ್ಲಿ ಅತ್ಯಂತ ಉನ್ನತ ಮಟ್ಟದ ನೈತಿಕತೆಯನ್ನು ಕಾಯ್ದುಕೊಳ್ಳಲು ಸೂಚಿಸುತ್ತದೆ. ಅಲ್ಲದೆ ಇದು ಭ್ರಷ್ಟಾಚಾರದ ವಿಧಾನಗಳು, ವಂಚನೆ ಪದ್ಧತಿಗಳು, ಬಲವಂತದ ಕ್ರಮಗಳು, ಅನೈತಿಕ ಅಭ್ಯಾಸಗಳು ಅಥವಾ ಬಿಡ್ಡಿಂಗ್ ಪ್ರಕ್ರಿಯೆಗೆ ಅಡಚಣೆಗೊಳಿಸುವ ಪ್ರಕ್ರಿಯಗಳ ಕುರಿತು ವ್ಯಾಖ್ಯಾನಿಸುತ್ತದೆ.
4. **ಬಂಡವಾಳ ವಾಪಸಾತಿ ಇಲಾಖೆಯ ಮಾರ್ಗಸೂಚಿಗಳು** – ಭಾರತ ಸರ್ಕಾರದ ಬಂಡವಾಳ ವಾಪಸಾತಿ ಇಲಾಖೆಯ ಆದೇಶ ಸಂಖ್ಯೆ 6/4/2001-DD- II ದಿನಾಂಕ 13ನೇ ಜುಲೈ 2001ರಲ್ಲಿ ಉಲ್ಲೇಖಿಸಿರುವಂತೆ ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ ಬಂಡವಾಳ ವಾಪಸಾತಿ ಪ್ರಕ್ರಿಯೆ ನಡೆಸಲು ಬಿಡ್ಡರ್ ಗಳಿಗೆ ಅರ್ಹತಾ ಮಾರ್ಗಸೂಚಿಗಳನ್ನು ನಿಗದಿಪಡಿಸಲಾಗಿದೆ. ಈ ಮಾರ್ಗಸೂಚಿಗಳು ಬಿಡ್ಡಿಂಗ್ ಪ್ರಕ್ರಿಯೆಯಲ್ಲಿ ಅನ್ವಯಿಸಲಾಗುವುದು.

ಕ-ರೈಡ್

K RIDE



# ದ್ವಿಪಥೀಕರಣ ಯೋಜನೆ ಕಾಮಗಾರಿ ಪ್ರಗತಿ

K-RIDE DOUBLING PROJECT FOCUS

## ಬೈಯಪ್ಪನಹಳ್ಳಿ – ಹೊಸೂರು (48 ಕಿ.ಮಿ)

ಬೈಯಪ್ಪನಹಳ್ಳಿ – ಹೊಸೂರು ನಡುವೆ ಹಾಲಿ ಇರುವ ರೈಲ್ವೆ ಮಾರ್ಗದ ಸಾಮರ್ಥ್ಯವನ್ನು ವೃದ್ಧಿಸಲಾಗುವುದು. ಬೈಯ್ಯಪ್ಪನಹಳ್ಳಿ–ಹೊಸೂರು(48 ಕಿ.ಮೀ) ದ್ವಿಪಥೀಕರಣ ಯೋಜನೆಗೆ ರೈಲ್ವೆ ಮಂಡಳಿ 2018–19ನೇ ಸಾಲಿನಲ್ಲಿ ಅನುಮೋದಿಸಿತ್ತು ಮತ್ತು ಅದನ್ನು ಆನಂತರ ರೈಲ್ವೆ ಸಚಿವಾಲಯ ಮತ್ತು ಕರ್ನಾಟಕ ಸರ್ಕಾರದ ಜಂಟಿ ಸಹಭಾಗಿ–ತ್ವದಲ್ಲಿ ರಚಿಸಲಾದ ಕ–ರೈಡ್ (ಕರ್ನಾಟಕ ರೈಲ್ವೆ ಮೂಲಸೌಲಭ್ಯ ಅಭಿವೃದ್ಧಿ ಕಂಪನಿ ನಿಯಮಿತ)ಗೆ 2020ರ ಜೂನ್ ತಿಂಗಳಲ್ಲಿ ರೈಲ್ವೆ ಇಲಾಖೆ ಯೋಜನೆಯನ್ನು ಕಾರ್ಯಗೊಳಿಸಲು ಹಸ್ತಾಂತರಿಸಿತು. ಈ ಯೋಜನೆಯ ಒಟ್ಟು ಉದ್ದ 48 ಕಿ.ಮೀ. ಆ 48 ಕಿ.ಮೀ. ಪೈಕಿ 40.05 ಕಿ.ಮೀ. ಕರ್ನಾಟಕ ರಾಜ್ಯದಲ್ಲಿ ಬರುತ್ತದೆ ಮತ್ತು 7.5 ಕಿ.ಮೀ ತಮಿಳುನಾಡು ರಾಜ್ಯದಲ್ಲಿ ಬರುತ್ತದೆ.

ದ್ವಿಪಥೀಕರಣ ಯೋಜನೆಯ ಲೋಡಿಂಗ್ ಸಾಮರ್ಥ್ಯ 25ಟಿ ಆಕ್ಸಲ್ ಲೋಡ್ ಆಗಿದೆ. ಯೋಜನೆಯ ಎಲ್ಲ ನಿಲ್ದಾಣಗಳು STD III ಪ್ಯಾನಲ್ ಇಂಟರ್ ಲಾಕಿಂಗ್ ವ್ಯವಸ್ಥೆ ಮತ್ತು ಕಲರ್ ಲೈಟ್ ಮಲ್ಟಿಪಲ್ ಸಿಗ್ನಲಿಂಗ್ ವ್ಯವಸ್ಥೆ ಹೊಂದಿರುತ್ತದೆ. ಈ ಯೋಜನೆ ಸಂಪೂರ್ಣವಾಗಿ 25 ಕೆವಿ ವೋವರ್ ಹೆಡ್ ಎಲೆಕ್ಟ್ರಿಫೈಡ್ (OHE) ಟ್ರ್ಯಾಕ್ಷನ್ ಹೊಂದಿರುತ್ತದೆ.

ಈ ಯೋಜನೆಗೆ ಅನುಮೋದಿತ ವೆಚ್ಚ 498.73 ಕೋಟಿ ರೂ ಮತ್ತು ಯೋಜನಾ ವೆಚ್ಚವನ್ನು ರೈಲ್ವೆ ಸಚಿವಾಲಯ ಮತ್ತು ಕರ್ನಾಟಕ ಸರ್ಕಾರ 50:50 ಅನುಪಾತದಲ್ಲಿ ಹಂಚಿಕೊಳ್ಳಲಿವೆ.



| ಮಂಜೂರಾತಿ ವರ್ಷ | 2018 -19 (ಜೂನ್'2020 ರಲ್ಲಿ ಕ -ರೈಡ್ ಗೆ ವರ್ಗಾಯಿಸಲಾಗಿದೆ) |
|---|---|
| ಮಂಜೂರಾದ ವೆಚ್ಚ | ರೂ. 498.73 ಕೋಟಿ |
| ಮಾರ್ಚ್ 23 ರವರೆಗೆ ನಿರೀಕ್ಷಿಸಲಾಗಿದೆ | ರೂ. 165.79 ಕೋಟಿ |
| 2023-24ರ ಅವಧಿಯಲ್ಲಿನ ವೆಚ್ಚ | ರೂ. 63 ಕೋಟಿ |

ಇದರಿಂದಾಗಿ ಹೆಬ್ಬಾಳ, ಬಾಣಸವಾಡಿ, ಬೆಳ್ಳಂದೂರು, ಕಾರ್ಮೆಲರಾಮ್ ಮತ್ತು ಹೀಲಲಿಗೆ ಮಾರ್ಗದ ಮೂಲಕ ಯಶವಂತಪುರ ಮತ್ತು ಸೇಲಂ ನಡುವೆ ಹೆಚ್ಚು ರೈಲುಗಳ ಸಂಚಾರಕ್ಕೆ ಅವಕಾಶವಾಗಲಿದ್ದು, ಇದರಿಂದ ಪ್ರಯಾಣಿಕರಿಗೆ ಹಾಗೂ ಸಾರ್ವಜನಿಕರಿಗೆ ಅನುಕೂಲವಾಗಲಿದೆ. ಇದು ಉತ್ತರ ಮತ್ತು ದಕ್ಷಿಣ ಕರ್ನಾಟಕದ ನಡುವೆ ಸಂಪರ್ಕವನ್ನು ಉತ್ತಮಗೊಳಿಸಲಿದೆ. ಇದು ಪ್ರಯಾಣದ ಸಮಯ ಹಾಗೂ ವಾಹನದಟ್ಟಣೆಯನ್ನು ತಗ್ಗಿಸಲಿದೆ. ಇದು ಯಶವಂತಪುರ ಮತ್ತು ಸೇಲಂ ನಡುವೆ ಸಂಚಾರ ವೃದ್ಧಿಸಲಿದೆ. ಈ ಯೋಜನೆ ಪೂರ್ಣಗೊಂಡ ಬಳಿಕ ಇದು ಹೆಸರಾಂತ ಐಟಿ ಕಾರಿಡಾರ್ ಅಂದರೆ ಬೆಳ್ಳಂದೂರು, ಕಾರ್ಮೆಲಾರಾಮ್ ಮೂಲಕ ಸಾಗುತ್ತದೆ ಹಾಗೂ ಹೊಸೂರಿನಂತಹ ಕೈಗಾರಿಕಾ ಪಟ್ಟಣವನ್ನು ಸಂಪರ್ಕಿಸುತ್ತದೆ.

2023–24ನೇ ವರ್ಷದಲ್ಲಿ ಬೆಳ್ಳಂದೂರು ರೋಡ್ – ಕಾರ್ಮೆಲರಾಮ್ (3.5 ಕಿಮೀ), ಹುಸ್ಕೂರು ಯಾರ್ಡ್, ಆನೇಕಲ್ ರಸ್ತೆ – ಮಾರನಾಯಕನಹಳ್ಳಿ(6.9 ಕಿ.ಮೀ) ಇದನ್ನು ಕಾರ್ಯಾಚರಣೆಗೊಳಿಸಲು ಯೋಜಿಸಲಾಗಿದೆ. ಇದು ಎಲ್ಲ ಸ್ಟೇಷನ್ ಯಾರ್ಡ್‌ಗಳು, ಬೆಳ್ಳಂದೂರು ರಸ್ತೆ, ಹುಸ್ಕೂರು, ಆನೇಕಲ್ ರಸ್ತೆ, ಮಾರನಾಯಕನಹಳ್ಳಿ) ಪ್ರಸಕ್ತ ಹಣಕಾಸು ವರ್ಷದ ಅಂತ್ಯಕ್ಕೆ ಕಾರ್ಯಾಚರಣೆ ಆರಂಭಿಸಲಿದ್ದು, ಇದರಿಂದ ರೈಲ್ವೆ ರೈಲುಗಳ ಕಾರ್ಯಾಚರಣೆ ಮತ್ತಷ್ಟು ಸರಳೀಕರಣಗೊಳಿಸಲಿದೆ. ಹುಸ್ಕೂರು ಯಾರ್ಡ್ ಮರುವಿನ್ಯಾಸ ಕಾರ್ಯವನ್ನು ನೈರುತ್ಯ ರೈಲ್ವೆ ವಲಯ ಕೈಗೊಂಡಿದೆ. ಇಡೀ ಯೋಜನೆ 2024ರ ಡಿಸೆಂಬರ್ ವೇಳೆಗೆ ಕಾರ್ಯಾಚರಣೆಗೊಳಿಸಲು ಉದ್ದೇಶಿಸಲಾಗಿದೆ.

## ದ್ವಿಪಥೀಕರಣ ಯೋಜನೆಯಲ್ಲಿ ಪ್ರಯಾಣಿಕರ ಸೌಕರ್ಯ ಕಾಮಗಾರಿಗಳು:

* ಪ್ರಸಕ್ತ ಹಣಕಾಸು ವರ್ಷದಲ್ಲಿ ಬೆಳ್ಳಂದೂರು ರಸ್ತೆ, ಆನೇಕಲ್ ರಸ್ತೆಗಳಲ್ಲಿ ಹೊಸ ನಿಲ್ದಾಣ ಕಟ್ಟಡಗಳು(G+1) ಸೇರಿ ಪ್ಲಾಟ್ ಫಾರಂ ಶೆಲ್ಟರ್ ಗಳನ್ನು ನಿರ್ಮಿಸಲು ಯೋಜಿಸಲಾಗಿದೆ. ಹುಸ್ಕೂರು ಹೊಸ ನಿಲ್ದಾಣ ಯಾರ್ಡ್ ಆಗಲಿದೆ ಮತ್ತು ಹೊಸ ನಿಲ್ದಾಣದ ಕಟ್ಟದ ಎರಡು ಲೂಪ್ ಮಾರ್ಗಗಳನ್ನು ಹೊಂದಿರಲಿದ್ದು, ಹುಸ್ಕೂರಿನಲ್ಲಿ ಕಾಮಗಾರಿ ಪ್ರಗತಿಯಲ್ಲಿದೆ.
* ಬೆಳ್ಳಂದೂರು ರಸ್ತೆಯಲ್ಲಿ (02 ಎಂಡ್ ಫಾಟ್ ಫಾಂ) ಉನ್ನತ ಮಟ್ಟದ ಪ್ಲಾಟ್ ಫಾರಂ, ಆನೇಕಲ್ ರಸ್ತೆ (ಐಲ್ಯಾಂಡ್ ಪ್ಲಾಟ್ ಫಾರಂ ಮತ್ತು ಅನೇಕಲ್ ರಸ್ತೆಯಲ್ಲಿ ಫುಟ್ ಒವರ್ ಬ್ರಿಡ್ಜ್ – ಪಾದಚಾರಿ ಮೇಲು ಸೇತುವೆ ನಿರ್ಮಿಸಲಾಗುವುದು.
* ಬೆಳ್ಳಂದೂರು ರಸ್ತೆಯಲ್ಲಿ ಪ್ರಯಾಣಿಕರ ಸಂಚಾರಕ್ಕೆ 05 ಮಾರ್ಗಗಳಲ್ಲಿ ಒಂದು ಸಬ್ ವೇಗಳನ್ನು ನಿರ್ಮಿಸಲು ಯೋಜಿಸಲಾಗಿದೆ ಮತ್ತು ಅದರ ಕಾಮಗಾರಿ ಪ್ರಗತಿಯಲ್ಲಿದೆ ಮತ್ತು ಅವು 2024ರ ಮಾರ್ಚ್ ವೇಳೆಗೆ ಪೂರ್ಣಗೊಳ್ಳಲಿವೆ ಎಂದು ನಿರೀಕ್ಷಿಸಲಾಗುತ್ತಿದೆ. ಹೀಲಲಿಗೆ ನಿಲ್ದಾಣ ಕಾಮಗಾರಿ ಈಗಾಗಲೇ ಪೂರ್ಣಗೊಂಡು, ಕಾರ್ಯಾಚರಣೆ ಆರಂಭಿಸಿದೆ. ಹೊಸ ನಿಲ್ದಾಣ ಕಟ್ಟಡ ಮತ್ತು ಐಲ್ಯಾಂಡ್ ಪ್ಲಾಟ್ ಫಾರಂ, ಪ್ಲಾಟ್ ಫಾರಂ ಶೆಲ್ಟರ್ ವಿಸ್ತರಣೆ ಕಾರ್ಯಗಳು ಪೂರ್ಣಗೊಂಡಿವೆ. ಹೀಲಲಿಗೆಯಲ್ಲಿ ಪಾದಚಾರಿ ಮೇಲ್ಸೇತುವೆ ನಿರ್ಮಾಣ ಪ್ರಗತಿಯಲ್ಲಿದೆ ಮತ್ತು ಅದು 2024ರ ಜನವರಿಗೆ ಪೂರ್ಣಗೊಳ್ಳುತ್ತದೆ ಎಂದು ನಿರೀಕ್ಷಿಸಲಾಗುತ್ತಿದೆ.

## ಪೂರ್ಣಗೊಳಿಸಲು ನಿಗದಿಪಡಿಸಿದ ದಿನಾಂಕ (ಟಿಡಿಸಿ)
## ಬೈಯಪ್ಪನಹಳ್ಳಿ–ಹೊಸೂರು (48 ಕಿ.ಮೀ) ದ್ವಿಪಥೀಕರಣ ಯೋಜನೆ ಕಾರ್ಯಾರಂಭಕ್ಕೆ ಬ್ಲಾಕ್ ವಾರು ಗುರಿ

| ಬ್ಲಾಕ್ ಸೆಕ್ಷನ್ | ಉದ್ದ | ಕಾರ್ಯಾರಂಭಕ್ಕೆ ನಿಗದಿತ ದಿನಾಂಕ |
|---|---|---|
| ಬೈಯ್ಯಪ್ಪನಹಳ್ಳಿ- ಬೆಳ್ಳಂದೂರು ರಸ್ತೆ | 9.7 ಕಿ.ಮೀ | ಸೆಪ್ಟೆಂಬರ್'24 |
| ಬೆಳ್ಳಂದೂರು ರಸ್ತೆ - ಕಾರ್ಮೆಲರಾಮ್ | 3.5 ಕಿ.ಮೀ | ಮಾರ್ಚ್'24 |
| ಕಾರ್ಮೆಲರಾಮ್ - ಹೀಲಲಿಗೆ | 10.3 ಕಿ.ಮೀ | ಈಗಾಗಲೇ 20ನೇ ಫೆಬ್ರವರಿ 2023 ರಂದು ಕಾರ್ಯಾರಂಭ ಮಾಡಲಾಗಿದೆ |
| ಹೀಲಲಿಗೆ - ಆನೇಕಲ್ ರಸ್ತೆ | 10 ಕಿ. ಮೀ | ಡಿಸೆಂಬರ್'24 |
| ಆನೇಕಲ್ ರಸ್ತೆ - ಮಾರನಾಯಕನಹಳ್ಳಿ | 6.9 ಕಿ. ಮೀ | ಮಾರ್ಚ್'24 |
| ಮಾರನಾಯಕನಹಳ್ಳಿ - ಹೊಸೂರು | 7.6 ಕಿ. ಮೀ | ಜೂನ್'24 |




### ಕಾಮಗಾರಿ ಪ್ರಮುಖ ಅಂಶಗಳ ಪ್ರಗತಿ ಈ ಕೆಳಗಿನಂತಿದೆ

| ಕ್ರಮ ಸಂಖ್ಯೆ | ಚಟುವಟಿಕೆ | ವಿಭಾಗ | ವ್ಯಾಪ್ತಿ | ಪೂರ್ಣಗೊಂಡಿದೆ | ಟಿ ಡಿ ಸಿ |
|---|---|---|---|---|---|
| 1. | ಭೂಮಿ ಕಾಮಗಾರಿ | ಕ್ಯೂ.ಮಿ | 1115000 | 769450 | ಕಾಮಗಾರಿಗಳು ಪ್ರಗತಿಯಲ್ಲಿವೆ. ಟಿ ಡಿ ಸಿ: 06/24 |
| 2. | ಬ್ಲ್ಯಾಂಕೆಟಿಂಗ್ | ಕ್ಯೂ.ಮಿ | 154000 | 39200 | 06/24 |
| 3. | ಕಿರು ಸೇತುವೆ | ಸಂಖ್ಯೆ | 101 | 70 | 05/24. |
| 4. | ಆರ್ ಯು ಬಿ | ಸಂಖ್ಯೆ | 15 | 6 | 2 ಆರ್ ಯು ಬಿಗಳಲ್ಲಿ ಕಾಮಗಾರಿ ಪ್ರಗತಿಯಲ್ಲಿದೆ. ಟಿಡಿಸಿ : 06/24 |
| 5. | ಪ್ರಮುಖ ಸೇತುವೆ | ಸಂಖ್ಯೆ | 7 | 0 | 4 ಸೇತುವೆಗಳ ಕಾಮಗಾರಿ ಪ್ರಗತಿಯಲ್ಲಿದೆ. ಟಿಡಿಸಿ: 10/24 |
| 6. | ಆರ್ಒಬಿ | ಸಂಖ್ಯೆ | 1 | 0 | 06/24 |
| 7. | ನಿಲ್ದಾಣ ನಿರ್ಮಾಣ | ಸಂಖ್ಯೆ | 4 | 1 | 3 ಕಡೆ ನಿಲ್ದಾಣ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. 03/24 |
| 8. | ಬ್ಯಾಲಸ್ಟ್ ಸಪ್ಲೈ | ಕ್ಯೂ.ಮಿ | 140500 | 41000 | 08/24 |
| 9. | ಟ್ರ್ಯಾಕ್ ಲಿಂಕಿಂಗ್ | ಕಿ.ಮೀ | 48 | 10.3 | 09/24 |
| 10. | ಎಸ್&ಟಿ ಕಾಮಗಾರಿ | ಸಂಖ್ಯೆ | 6 | 0 | 11/24 |
| 11. | ಓ.ಎಚ್.ಇ ಕಾಮಗಾರಿ | ಕಿ.ಮೀ | 48 | 10.3 | |
| 12. | ಕಾರ್ಯಾರಂಭ | ಕಿ.ಮೀ | 48 | 10.3 | 12/24 |


ಕ–ರೈಡ್
K RIDE

## 1 ದ್ವಿಪಥೀಕರಣ ಯೋಜನೆಯ ಪ್ರಗತಿಯ ಮಾಹಿತಿ

### ಯಶವಂತಪುರದಿಂದ ಚನ್ನಸಂದ್ರದವರೆಗೆ (21.70 ಕಿ.ಮೀ)



ಯಶವಂತಪುರ



ಯಶವಂತಪುರ ಬೈಪಾಸ್



ಹೆಬ್ಬಾಳ



**ಭೂ ಮರು ಭರ್ತಿ ಮಾಡುವುದು, ಭೂಮಿ ಅಗೆಯುವ ಕಾಮಗಾರಿ ಪ್ರಗತಿಯಲ್ಲಿವೆ**

ಬಾಣಸ್ವಾಡಿ






ಬೈಯಪ್ಪನಹಳ್ಳಿ 'ಎ' ಕ್ಯಾಬಿನ್



**ಕಿರು ಸೇತುವೆ (ಎಂಐಬಿ) 538 ನಿರ್ಮಾಣ ಮತ್ತು ಭೂಮಿ ಮರುಭರ್ತಿ ಮಾಡುವ ಕೆಲಸಗಳು ಪ್ರಗತಿಯಲ್ಲಿವೆ**

## 2 ದ್ವಿಪಥೀಕರಣ ಯೋಜನೆಯ ಪ್ರಗತಿಯ ಮಾಹಿತಿ

### ಬೈಯಪನಹಳ್ಳಿ 'ಎ' ಕ್ಯಾಬಿನಿಂದ ಹೊಸೂರು ವರೆಗೆ (21.70 ಕಿ.ಮೀ)




ಬೆಳ್ಳಂದೂರು ರೋಡ್



ಕಾರ್ಮೆಲರಾಮ್



ಹೀಲಲಿಗೆ



**ಬ್ಲಾಂಕೆಟಿಂಗ್, ಟ್ರ್ಯಾಕ್ ಲಿಂಕ್ ಮತ್ತು ಭೂ ಮರುಭರ್ತಿ ಕೆಲಸಗಳು ಪ್ರಗತಿಯಲ್ಲಿವೆ**

ಆನೇಕಲ್ ರೋಡ್



ಮಾರಾನಾಯಕನಹಳ್ಳಿ




ಹೊಸೂರು



**ಭೂಮಿ ತಡೆಗೋಡೆ ರಚನೆ ಮತ್ತು ಭೂ ಮರುಭರ್ತಿ ಕೆಲಸ ಪ್ರಗತಿಯಲ್ಲಿವೆ**

# ಕಾರಿಡಾರ್– 2 ಮಲ್ಲಿಗೆ ಮಾರ್ಗದ ಪ್ರಗತಿಯ ಅಪ್ಡೇಟ್:






- ಕಾರಿಡಾರ್–2 ಬೈಯ್ಯಪ್ಪನಹಳ್ಳಿಯಿಂದ –ಚಿಕ್ಕಬಾಣಾವರದವರೆಗೆ ಸಿವಿಲ್ ಕಾಮಗಾರಿ ಟೆಂಡರ್ ಅನ್ನು ಎಲ್&ಟಿ ಲಿಮಿಟೆಡ್‌ಗೆ 26.08.2022 ರಂದು ನೀಡಲಾಯಿತು. 25 ಕಿ.ಮೀ ಕಾರಿಡಾರ್ –2, 8.027ಕಿ.ಮೀ ಎತ್ತರಿಸಿದ ವಿಭಾಗಗಳನ್ನು ಮತ್ತು 17.551ಕಿ.ಮೀ ಗ್ರೇಡ್ ಸೆಕ್ಷನ್ (ಸಮತಲ) ವಿಭಾಗಗಳನ್ನು ಒಳಗೊಂಡಿದೆ.
- ಕಾರಿಡಾರ್–2 ರ ಯೋಜನೆಯ ಜೋಡಣೆಯ ಉದ್ದಕ್ಕೂ ಅನೇಕ ಸ್ಥಳಗಳಲ್ಲಿ ನಿರ್ಮಾಣ ಕಾರ್ಯವು ಆರಂಭವಾಗಿದೆ.

## ಸಾಧಿಸಿದ ಪ್ರಮುಖ ಮೈಲಿಗಲ್ಲುಗಳು:

1. ಹೆಬ್ಬಾಳ & ಯಶವಂತಪುರ ಯಾರ್ಡ್ ನಲ್ಲಿ ಒಟ್ಟು 93 ಪೈಲ್‌ಗಳ ನಿರ್ಮಾಣ ಪೂರ್ಣಗೊಳಿಸಲಾಗಿದೆ
2. ಅಂಚಿನಲ್ಲಿ ಭೂ ಕೆಲಸ ಮತ್ತು ಒಡ್ಡು ಕಟ್ಟುವುದು ಪ್ರಗತಿಯಲ್ಲಿದೆ.
3. 7 ಕಿ.ಮೀವರೆಗೆ ವಿದ್ಯುತ್ ಸೌಕರ್ಯಗಳ ಸ್ಥಳಾಂತರ ಪ್ರಕ್ರಿಯೆ ಪೂರ್ಣ (ಯಶವಂತಪುರ ಮತ್ತು ಚಿಕ್ಕಬಾಣಾವರದ ನಡುವೆ).
4. ಅಲ್ಲದೆ, ಬಾಣಸವಾಡಿಯಿಂದ ಹೆಬ್ಬಾಳದ ನಡುವಿನ ಎಲ್ಸಿ ಎಲಿಮಿನೇಷನ್ ಸ್ಥಳದಲ್ಲಿ ವಿದ್ಯುತ್ ಸೌಲಭ್ಯಗಳ ಸ್ಥಳಾಂತರವು ಪ್ರಗತಿಯಲ್ಲಿದೆ.
5. ನೀರು, ಒಳಚರಂಡಿ ಮತ್ತು ಅನಿಲ ಮಾರ್ಗಗಳ ಸ್ಥಳಾಂತರದಂತಹ ಇತರೆ ಬಳಕೆ ಕಾಮಗಾರಿಗಳು ಪ್ರಗತಿಯಲ್ಲಿವೆ.

## 17.551 ಕಿ.ಮೀ ಉದ್ದದ ಸಮತಲ ವಿಭಾಗಗಳಲ್ಲಿ ಸಿವಿಲ್ ಕಾಮಗಾರಿಗಳು

* ಬಾಣಸವಾಡಿಯಿಂದ ಹೆಬ್ಬಾಳ ಮತ್ತು ಯಶವಂತಪುರದಿಂದ ಚಿಕ್ಕಬಾಣಾವರದವರೆಗೆ ಕ್ರಮವಾಗಿ 800ಮೀ ಮತ್ತು 570 ಮೀಟರ್ ಉದ್ದದ ಅರ್ಥ್ ರಿಟೇನಿಂಗ್ ಸ್ಟ್ರಕ್ಚರ್ (ಇಆರ್ ಎಸ್) ಸದ್ಯ ನಿರ್ಮಾಣ ಹಂತದಲ್ಲಿದೆ.
* ಒಟ್ಟು 53 ಸಣ್ಣ ಸೇತುವೆಗಳಲ್ಲಿ (ಎಂಐಬಿ), ಯಶವಂತಪುರದಿಂದ ಚಿಕ್ಕಬಾಣಾವರದಿಂದ 4 ಸಣ್ಣ ಸೇತುವೆಗಳು ಪೂರ್ಣಗೊಂಡಿದೆ ಮತ್ತು ಬಾಣಸವಾಡಿಯಿಂದ ಹೆಬ್ಬಾಳದವರೆಗೆ 3 ಸೇತುವೆಗಳು ಭಾಗಶಃ ಪೂರ್ಣಗೊಂಡಿವೆ, ಇತರೆ 7 ಸೇತುವೆಗಳು ನಿರ್ಮಾಣ ಹಂತದಲ್ಲಿವೆ.
* 2 ಆರ್ ಒಬಿ ಅನ್ನು ಯಶವಂತಪುರದಿಂದ ಚಿಕ್ಕಬಾಣಾವರದಿಂದ ಮರು ನಿರ್ಮಾಣ ಮಾಡಲಾಗುವುದು, ಆರಂಭಿಕ ಪೈಲ್ ಲೋಡ್ ಪರೀಕ್ಷಾ ಚಟುವಟಿಕೆಗಳು ಪ್ರಗತಿಯಲ್ಲಿವೆ.
* ಒಟ್ಟು 20 ಆರ್ ಯುಬಿ ಗಳಲ್ಲಿ– ಬಾಣಸವಾಡಿಯಿಂದ ಹೆಬ್ಬಾಳ ಶಾಂಪುರ ಗೇಟ್‌ನಲ್ಲಿ ಒಂದು ಆರ್ ಯುಬಿ ಭಾಗಶಃ ಪೂರ್ಣಗೊಂಡಿದೆ.
* ಭಾರತೀಯ ವಾಯುಪಡೆಗಾಗಿ ಜಾಲಹಳ್ಳಿಯಲ್ಲಿ 500 ಮೀಟರ್ ಉದ್ದದ ಗಡಿ ಗೋಡೆಯನ್ನು ನಿರ್ಮಿಸಲಾಗುತ್ತಿದೆ (ಸ್ವಾಧೀನಪಡಿಸಿಕೊಂಡ ಭೂಮಿಗೆ ಬದಲಾಗಿ ಸಮಾನ ಮೌಲ್ಯದ ಮೂಲಸೌಕರ್ಯದ ಭಾಗವಾಗಿ ಪ್ರಗತಿಯಲ್ಲಿದೆ)
* ಜಾಲಹಳ್ಳಿಯಲ್ಲಿ (ಸಿಕ್ಯೂಎಇ) ಬಿ ಎಸ್ ಆರ್ ಪಿ ಕಾರಿಡಾರ್–2 ಅನ್ನು ಅತಿಕ್ರಮಿಸುತ್ತಿರುವ ರಕ್ಷಣಾ ಭೂಮಿಯಲ್ಲಿರುವ ಸ್ವತ್ತುಗಳ ಸ್ಥಳಾಂತರ ಮತ್ತು ಪುನರ್ ನಿರ್ಮಾಣದ ಲೇಔಟ್ ಯೋಜನೆಯನ್ನು ಅನುಮೋದಿಸಲಾಗಿದೆ.
* ಗ್ಯಾರಿಸನ್ ಬಾಣಸವಾಡಿಯಲ್ಲಿ (ಸೇನೆ) ಬಿ ಎಸ್ ಆರ್ ಪಿ ಕಾರಿಡಾರ್–2 ಅನ್ನು ಅತಿಕ್ರಮಿಸುತ್ತಿರುವ ರಕ್ಷಣಾ ಭೂಮಿಯಲ್ಲಿರುವ ಸ್ವತ್ತುಗಳ ಸ್ಥಳಾಂತರ ಮತ್ತು ಪುನರ್ ನಿರ್ಮಾಣಕ್ಕಾಗಿ ಲೇಔಟ್ ಯೋಜನೆ ಅನುಮೋದನೆಗಾಗಿ ರಕ್ಷಣಾ ಅಧಿಕಾರಿಗಳಿಗೆ ಪ್ರಸ್ತಾವ ಸಲ್ಲಿಸಲಾಗಿದೆ.
* ಎಲ್ ಸಿ ಎಲಿಮಿನೇಷನ್ ಸ್ಥಳದಲ್ಲಿ ಗೇಟ್ ಮುಚ್ಚಲು ಅನುಮತಿಯನ್ನು ಬೆಂಗಳೂರಿನ ಆಯುಕ್ತ ರಿಂದ ಸ್ವೀಕರಿಸಲಾಗಿದೆ. ಸದ್ಯ ಎಲ್ ಸಿ–141 ಗೇಟ್ ಅನ್ನು ತಾತ್ಕಲಿಕವಾಗಿ ಮುಚ್ಚಲಾಗಿದೆ.

## ಹೆಬ್ಬಾಳದಿಂದ ಯಶವಂತಪುರ ಮತ್ತು ಬೆನ್ನಿಗಾನಹಳ್ಳಿವರೆಗೆ ಒಟ್ಟು 8.027 ಕಿಮೀ ಉದ್ದದ ಎಲಿವೇಟೆಡ್ ವೈಯಾಡಕ್ಟ್ ಕಾಮಗಾರಿ.

* ಹೆಬ್ಬಾಳ ಮತ್ತು ಯಶವಂತಪುರದಲ್ಲಿ ಪ್ರಾಥಮಿಕ ಪೈಲ್ ಲೋಡ್ ಪರೀಕ್ಷೆಗಳು ಪೂರ್ಣಗೊಂಡಿವೆ.
* ಹೆಬ್ಬಾಳ ಸ್ಥಳದಲ್ಲಿ, 40 ವರ್ಕಿಂಗ್ ಪೈಲ್‌ಗಳು ಪೂರ್ಣಗೊಂಡಿವೆ ಮತ್ತು ಮೊದಲ ಪೈಲ್ ಕ್ಯಾಪ್ (ಪಿ 11) ನಿರ್ಮಾಣ ಪೂರ್ಣಗೊಂಡಿದೆ ಮತ್ತು ಒಟ್ಟು 3 ಪೈಲ್ ಕ್ಯಾಪ್, 2 ಪಿಯರ್ ಗಳು ಪೂರ್ಣಗೊಂಡಿದೆ.
* ವೈಪಿಆರ್ ಯಾರ್ಡ್ ನಲ್ಲಿ ಒಟ್ಟು 53 ಪೈಲ್‌ಗಳು ಪೂರ್ಣಗೊಂಡಿದೆ. ಉಪ–ಕೇಂದ್ರ ಎಲೆಕ್ಟ್ರಿಕಲ್ (ಎಸ್ ಎಸ್ ಇ), ವಹಿವಾಟು ವಿತರಣಾ ಇಲಾಖೆ (ಟಿಆರ್ ಡಿ) ಮತ್ತು ಪಾರ್ಸೆಲ್ ಕಚೇರಿಗಳ ಸ್ಥಳಾಂತರವು ಪ್ರಗತಿಯಲ್ಲಿದೆ.

## ಕಾಸ್ಟಿಂಗ್ ಯಾರ್ಡ್ ಮತ್ತು ಕಾಂಕ್ರೀಟ್ ಘಟಕಗಳು

* ಗೊಲ್ಲಹಳ್ಳಿಯಲ್ಲಿ ಗುತ್ತಿಗೆ ಏಜೆನ್ಸಿಯಿಂದ 21 ಎಕರೆ ವಿಸ್ತೀರ್ಣದಲ್ಲಿ ಪ್ರೀಕಾಸ್ಟ್ ಯಾರ್ಡ್ ಸ್ಥಾಪಿಸಲಾಗಿದ್ದು, ಅಲ್ಲಿ ಗ್ಯಾಂಟ್ರಿ, ಬ್ಯಾಚಿಂಗ್ ಪ್ಲಾಂಟ್ ಮತ್ತು ಇತರೆ ಕಾಮಗಾರಿ ಪ್ರಗತಿಯಲ್ಲಿದೆ.
* ಪಿಎಸ್‌ಸಿ ಪ್ರೀಕಾಸ್ಟ್ ಯು ಗಿರ್ಡರ್, ಐ ಗಿರ್ಡರ್ ಮತ್ತು ಪಿಯರ್‌ಕ್ಯಾಪ್ ಗಾಗಿ ಕಾಸ್ಟಿಂಗ್ ಬೆಡ್‌ಗಳ ತಯಾರಿ ಪ್ರಗತಿಯಲ್ಲಿದೆ.
* ಯು–ಗರ್ಡರ್‌ಗಳ ಎರಕಹೊಯ್ದವನ್ನು ಕಾಸ್ಟಿಂಗ್ ಯಾರ್ಡ್‌ನಲ್ಲಿ ಮಾಡಲಾಗುತ್ತದೆ ಮತ್ತು ಕಾರಿಡಾರ್‌ನ ಉದ್ದಕ್ಕೂ ಎತ್ತರಿಸುವ ಸ್ಥಳಗಳಿಗೆ ಪ್ರಿಕಾಸ್ಟ್ ಘಟಕಗಳನ್ನು ಸಾಗಿಸಲಾಗುತ್ತದೆ.
* ಗುತ್ತಿಗೆ ಏಜೆನ್ಸಿ ಸ್ಥಾಪಿಸಿರುವ 3 ಬ್ಯಾಚಿಂಗ್ ಪ್ಲಾಂಟ್‌ಗಳಲ್ಲಿ ತಲಾ ಒಂದನ್ನು ಯಶವಂತಪುರ ಮತ್ತು ಗೊಲ್ಲಹಳ್ಳಿಯಲ್ಲಿ ಕಾರ್ಯಾರಂಭ ಮಾಡಲಾಗಿದ್ದು, ಹೆಬ್ಬಾಳದಲ್ಲಿ ಮೂರನೇಯ ಕಾರ್ಯ ಪ್ರಗತಿಯಲ್ಲಿದೆ.

## ಇತರೆ ಕಾಮಗಾರಿಗಳು:

* 2098 ಸಂಖ್ಯೆಗಳ ಮರ ಕಡಿಯಲು ಮತ್ತು 178 ಸಂಖ್ಯೆಗಳ ಮರಗಳನ್ನು ಕಸಿ ಮಾಡಲು ಮರ ಪ್ರಾಧಿಕಾರದಿಂದ ಅಗತ್ಯ ಅನುಮತಿಗಳನ್ನು ಪಡೆಯಲಾಗಿದೆ ಮತ್ತು ನಿಗದಿತ ನಿಯಮಗಳ ಅನುಸಾರವಾಗಿ ಕಾಮಗಾರಿ ಪ್ರಗತಿಯಲ್ಲಿದೆ.
* ಶೇ.55 ರಷ್ಟು ಮರ ಕಡಿಯುವ ಕೆಲಸ ಪೂರ್ಣಗೊಂಡಿದೆ ಮತ್ತು ಕಾರಿಡಾರ್– 2 ನಲ್ಲಿ ಶೇ. 35ರಷ್ಟು ಮರಗಳ ಸ್ಥಳಾಂತರ ಪೂರ್ಣಗೊಂಡಿದೆ
* ವಿವಿಧ ಕಟ್ಟಡಗಳ ನಿರ್ಮಾಣಕ್ಕೆ ವಿನ್ಯಾಸ ಮತ್ತು ರೇಖಾಚಿತ್ರಗಳನ್ನು ಪ್ರೂಫ್ ಕನ್ಸಲ್ಟೆಂಟ್ (ಐಐಟಿ ಮದ್ರಾಸ್) ಅನುಮೋದಿಸಿದ್ದಾರೆ.

# ಕಾರಿಡಾರ್– 1 ದೇವನಹಳ್ಳಿ ಸೇರಿದಂತೆ ವಿಮಾನ ನಿಲ್ದಾಣ ಸಂಪರ್ಕ



## ರೈಲ್ವೆ ಅನುಮೋದಿಸಿರುವ ಮಾರ್ಗ

* ನೈರುತ್ಯ ರೈಲ್ವೆ (ಎಸ್ ಡಬ್ಲ್ಯೂ ಆರ್ ) ವಿಭಾಗದ ಅಧಿಕಾರಿಯ ವಿಶ್ಲೇಷಣೆಗಳನ್ನು ತಿಳಿಸಿದ ನಂತರ, ಕ–ರೈಡ್ ಪರಿಷ್ಕೃತ ಜೋಡಣೆಯನ್ನು (ಎಸ್‌ಬಿಸಿ ಯಿಂದ ದೇವನಹಳ್ಳಿ) ಎಸ್‌ಬಿಸಿ/ ವಿಭಾಗಕ್ಕೆ 24.11.2023 ರಂದು ರೈಲ್ವೆಯ ಇ–ಡಿಎಎಸ್ ಮೂಲಕ ರೈಲ್ವೆಯ ಪರಿಶೀಲನೆಯಲ್ಲಿ ಸಲ್ಲಿಸಿದೆ.
* ರೈಲ್ವೆ ಅಧಿಕಾರಿಗಳ ಟೀಕೆಗಳು / ವಿಮರ್ಶೆಗಳಿಗೆ ಅನುಗುಣವಾಗಿ ಪಾಲನಾ ಕ್ರಮಗಳನ್ನು ಸಿದ್ಧಪಡಿಸಲಾಗಿದೆ ಮತ್ತು ಅಂತಿಮ ಅನುಮೋದನೆಗಾಗಿ 24.11.2023 ರಂದು ರೈಲ್ವೆಯ ಇ–ಡಾಸ್ ಮೂಲಕ ಅಪ್ಲೋಡ್ ಮಾಡಲಾಗಿದ್ದು, ಸದ್ಯ ಅದು ರೈಲ್ವೆಯ ಪರಿಶೀಲನೆಯಲ್ಲಿದೆ.

## ಕಾರಿಡಾರ್ 1ರ ಟೆಂಡರ್ ಪ್ರಕ್ರಿಯೆ– ಅಂದಾಜು 51 ಕಿ.ಮೀ.

* ಹೆಚ್ಚಿನ ಸಂಖ್ಯೆಯ ಬಿಡ್ ದಾರರ ಭಾಗವಹಿಸುವಿಕೆ ಉತ್ತೇಜಿಸಲು ಮತ್ತು ಯೋಜನೆ ಶೀಘ್ರವಾಗಿ ಪೂರ್ಣಗೊಳಿಸಲು, ಕಾರಿಡಾರ್ 1 ಅನ್ನು ಎರಡು ಪ್ಯಾಕೇಜ್‌ಗಳಾಗಿ ವಿಂಗಡಿಸಲಾಗಿದೆ. ಪ್ಯಾಕೇಜ್ 1 ಎ ಅಂದರೆ ಕೆಎಸ್‌ಆರ್ ಬೆಂಗಳೂರು ನಗರದಿಂದ ಯಲಹಂಕಕ್ಕೆ ಅಂದಾಜು 17ಕಿ.ಮೀ ಉದ್ದ ಮತ್ತು ಪ್ಯಾಕೇಜ್ 1 ಬಿ ಅಂದರೆ ಯಲಹಂಕದಿಂದ ದೇವನಹಳ್ಳಿ ಸೇರಿದಂತೆ ವಿಮಾನ ನಿಲ್ದಾಣದ ಸಂಪರ್ಕ ಅಂದಾಜು 34 ಕಿ.ಮೀ ಉದ್ದ.
* ಟೆಂಡರ್ ಡಾಕ್ಯುಮೆಂಟ್, ಸಂಬಂಧಿತ ನಕ್ಷೆಗಳು ಮತ್ತು ಪ್ಯಾಕೇಜ್ 1 ಎ ಗಾಗಿ ವೆಚ್ಚದ ಅಂದಾಜನ್ನು ಜನರಲ್ ಕನ್ಸಲ್ಟೆಂಟ್ (ಜಿಸಿ) ನೊಂದಿಗೆ ಸಮಾಲೋಚಿಸಿ ಫಂಡಿಂಗ್ ಏಜೆನ್ಸಿ (ಇಐಬಿ) ಮಾನದಂಡಗಳ ಪ್ರಕಾರ ಅಂತಿಮಗೊಳಿಸಲಾಗಿದೆ.
* ದೆಹಲಿಯ ಎಎಸ್‌ಐ (ಭಾರತದ ಪುರಾತತ್ವ ಸಮೀಕ್ಷೆ) ಮತ್ತು ಕ–ರೈಡ್ ಜೊತೆಗಿನ ಪತ್ರ ವ್ಯವಹಾರಗಳು ದೇವನಹಳ್ಳಿ ಬಳಿ ಟಿಪ್ಪುವಿನ ಜನ್ಮಸ್ಥಳ ಮತ್ತು ಟಿಪ್ಪು ಕೋಟೆಗೆ ರಾಷ್ಟ್ರೀಯ ಸ್ಮಾರಕ ಪ್ರಾಧಿಕಾರದಿಂದ ಅನುಮತಿ ಪಡೆಯುವ ಪ್ರಕ್ರಿಯೆ ಆರಂಭಿಸಲಾಗಿದೆ.
* ಪ್ಯಾಕೇಜ್ 1 ಎ ಟೆಂಡರ್ ನ ಕರೆಯುವುದು/ಅಧಿಸೂಚನೆಯನ್ನು ಖರೀದಿ ಯೋಜನೆಯ ಪ್ರಕಾರ ಡಿಸೆಂಬರ್ 2023 ರಲ್ಲಿ ತಾತ್ಕಾಲಿಕವಾಗಿ ಯೋಜಿಸಲಾಗಿದೆ.
* ಪ್ಯಾಕೇಜ್ 1 ಎ ಟೆಂಡರ್ ಅಂತಿಮಗೊಳಿಸಿದ ನಂತರ, ಪ್ಯಾಕೇಜ್ 1 ಬಿ ಗಾಗಿ ಟೆಂಡರ್ ದಾಖಲೆಯನ್ನು ಅಂತಿಮಗೊಳಿಸಲಾಗುತ್ತದೆ.

ಕ-ರೈಡ್
K RIDE

## ಕಾರಿಡಾರ್ – 3 ಕೆಂಗೇರಿಯಿಂದ – ವೈಟ್ ಫೀಲ್ಡ್‌ವರೆಗೆ

ಬಿ ಎಸ್ ಸಿಯಿಂದ ವೈಟ್ ಫೀಲ್ಡ್ ನಡುವೆ ನಾಲ್ಕು ಮಾರ್ಗಗಳ ಬಳಕೆ ರೈಟ್ಸ್ ಕರಡು ಪೂರ್ವ-ಸಾಧ್ಯತಾ ವರದಿಯನ್ನು ಕ-ರೈಡ್ ಗೆ ಸಲ್ಲಿಸಿದೆ. ಇದೇ 15.9.23 ರಂದು ಹುಬ್ಬಳ್ಳಿಯಲ್ಲಿ ನೈರುತ್ಯ ರೈಲ್ವೆ ವಲಯದ ಅಧಿಕಾರಿಯೊಂದಿಗೆ ಚರ್ಚಿಸಲಾಗಿದೆ. ಅಗತ್ಯವಿರುವ ತಿದ್ದುಪಡಿಗಳನ್ನು ವರದಿಯಲ್ಲಿ ನವೀಕರಿಸಲಾಗಿದೆ ಮತ್ತು 04.10.2023 ರಂದು ಕ-ರೈಡ್ ಮೂಲಕ ರೈಲ್ವೆಗೆ ಕಳುಹಿಸಲಾಗಿದೆ. ರೈಟ್ಸ್ ನಿಂದ ಅಂತಿಮ ವರದಿಯ ಸಲ್ಲಿಕೆ ಬಾಕಿ ಉಳಿದಿದೆ.

## ಕಾರಿಡಾರ್ – 4 ಹೀಲಲಿಗೆಯಿಂದ – ರಾಜಾನಕುಂಟೆವರೆಗೆ

ಕಾರಿಡಾರ್-4 ಹೀಲಲಿಗೆಯಿಂದ ರಾಜಾನಕುಂಟೆಗೆ ಸಿವಿಲ್ ಕಾಮಗಾರಿಗಳ ಟೆಂಡರ್ ಅನ್ನು 4-07-2023 ರಂದು ತೆರೆಯಲಾಯಿತು. 48 ಕಿ. ಮೀ ಉದ್ದದ 4ನೇ ಕಾರಿಡಾರ್, 8.66 ಕಿಮೀ ಎಲಿವೇಟೆಡ್ ಸೆಕ್ಷನ್ ನೊಂದಿಗೆ ಒಳಗೊಂಡಿದೆ ಮತ್ತು ಗ್ರೇಡ್ ಮಟ್ಟದಲ್ಲಿ 37.92 ಕಿಮೀ ವಿಭಾಗವನ್ನು ಒಳಗೊಂಡಿದೆ.

* 30/12/2023 ರಂದು M/s L&T ಗೆ ನೀಡಲಾದ ಟೆಂಡರ್ ಬೆಲೆ ರೂ. 1,040.51. ಕೋಟಿ ರೂ. ಪೂರ್ಣಗೊಳ್ಳುವ ಅವಧಿ 30 ತಿಂಗಳುಗಳು.
* ಭೂ ಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದೆ.




## ಕಾರಿಡಾರ್- 2 ಮಲ್ಲಿಗೆ ಮಾರ್ಗದ ಪ್ರಗತಿಯ ಅಪ್ಡೇಟ್:

### 1. ಚಿಕ್ಕಬಾಣಾವರ

ಭೂಮಿ ಉಳಿಸಿಕೊಳ್ಳುವ ರಚನೆ, ರಾಫ್ಟ್ ಮತ್ತು ರಿಇನ್ ಫೋರ್ಸ್ ಮೆಂಟ್ ಫಿಕ್ಸಿಂಗ್, ಗೋಡೆಗಳಿಗೆ ಕಾಂಕ್ರೀಟ್ ಮಾಡುವ ಕಾಮಗಾರಿ ಪ್ರಗತಿಯಲ್ಲಿದೆ






### 2. ಜಾಲಹಳ್ಳಿ

ದೇವಾಲಯದ ಸ್ಥಳಾಂತರ ಮತ್ತು ಜಾಲಹಳ್ಳಿಯಲ್ಲಿ 500 ಮೀಟರ್ ಉದ್ದದ ವಾಯುಪಡೆಯ ಗಡಿ ಗೋಡೆ ಪ್ಲಾಸ್ಟರಿಂಗ್ ಮಾಡುವ ಕಾಮಗಾರಿ ಪ್ರಗತಿಯಲ್ಲಿದೆ






### 3. ಮೈದರಹಳ್ಳಿ

ಮೈದರಹಳ್ಳಿ ಮತ್ತು ಶೆಟ್ಟಿಹಳ್ಳಿ ನಡುವೆ ಇಆರ್‌ಎಸ್ ಗೋಡೆ ಸಿಮೆಂಟ್ ಮಾಡುವುದು, ವಾಲ್ ಶಟರಿಂಗ್, ಅರ್ಥ್ ಕಟಿಂಗ್, ಅರ್ಥ್ ಲೆವೆಲಿಂಗ್, ಎಂಐಜಿ 405 ಕಾಮಗಾರಿ ಪ್ರಗತಿಯಲ್ಲಿದೆ










### 4. ಹೆಬ್ಬಾಳ

ಪೈರ್ (P14) ಡಿ-ಶಟರಿಂಗ್, ಪೈಲಿಂಗ್ (P12) ಹೆಡ್ ಚಿಪ್ಪಿಂಗ್ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ






### 5. ಕನಕ ನಗರ

ಇಆರ್‌ಎಸ್ ರಾಫ್ಟ್ ನಿರ್ಮಾಣ, ಬಾರ್ ಬೈಂಡಿಂಗ್ ಕಾಮಗಾರಿಯು ಜಿ ಡಬ್ಲ್ಯೂ ಎಸ್ ಎಸ್ ಬಿ/ಎಸ್‌ಟಿಪಿ ಯಲ್ಲಿ ಪ್ರಗತಿಯಲ್ಲಿದೆ






### 6. ನಾಗವಾರ

ಎಲ್. ಸಿ 141 ನಿವಾರಣೆಗೆ ರಸ್ತೆ ಕೆಳ ಸೇತುವೆ ನಿರ್ಮಾಣ (ಆರ್.ಯು.ಬಿ), ಇ ಆರ್ ಎಸ್, ಭೂಮಿ ಅಗೆಯುವ ಕಾಮಗಾರಿ ಪ್ರಗತಿಯಲ್ಲಿದೆ






### 7. ಕಾವೇರಿನಗರ

ಪ್ಲೇನ್ ಸಿಮೆಂಟ್ ಕಾಂಕ್ರೀಟ್, ಭೂಮಿ ತಡೆಗೋಡೆ ನಿರ್ಮಾಣ (ಇಆರ್‌ಎಸ್ ) ರಾಫ್ಟ್, ವಾಲ್ ಶಟರಿಂಗ್ ಕಾಮಗಾರಿ ಪ್ರಗತಿಯಲ್ಲಿದೆ





ಕ-ರೈಡ್
K RIDE

# ಮಹತ್ವದ ಮೈಲಿಗಲ್ಲು

## ಬಿ ಎಸ್ ಆರ್ ಪಿ ಜಾರಿಗೊಳಿಸಲು ಕರ್ನಾಟಕ ಸರ್ಕಾರ, ರೈಲ್ವೆ ಸಚಿವಾಲಯ ಮತ್ತು ಕ-ರೈಡ್ ನಡುವೆ ತ್ರಿಪಕ್ಷೀಯ ಒಪ್ಪಂದಕ್ಕೆ ಸಹಿ.



2023ರ ನವೆಂಬರ್ 23ರಂದು ರೈಲ್ವೇ ಸಚಿವಾಲಯ, ಕರ್ನಾಟಕ ಸರ್ಕಾರ ಮತ್ತು ಕ-ರೈಡ್ (ರೈಲ್ವೆ ಮೂಲಸೌಲಭ್ಯ ಅಭಿವೃದ್ಧಿ ಕಂಪನಿ (ಕರ್ನಾಟಕ) ನಿಯಮಿತ ನಡುವೆ ತ್ರಿಪಕ್ಷೀಯ ಒಪ್ಪಂದಕ್ಕೆ ಸಹಿ ಮಾಡಿದವು. ಈ ಒಪ್ಪಂದವು ಮೂರು ಸಂಸ್ಥೆಗಳ ನಡುವೆ ಜವಾಬ್ದಾರಿಗಳು ಮತ್ತು ಸಮನ್ವಯ ವಿಧಾನವನ್ನು ನಿಗದಿಪಡಿಸುತ್ತದೆ. ಬಿ ಎಸ್ ಆರ್ ಪಿ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಕರ್ನಾಟಕ ಸರ್ಕಾರ, ರೈಲ್ವೇ ಸಚಿವಾಲಯ ಮತ್ತು ಕ-ರೈಡ್ ನ ಪಾತ್ರವನ್ನು ಮಾರ್ಗದರ್ಶನ ಮತ್ತು ಆಡಳಿತ ನಡೆಸುವ ಸಹಕಾರ ಮತ್ತು ವಿಧಾನಗಳ ವಿಶಾಲ ತತ್ವಗಳನ್ನು ರೂಪಿಸುವುದು ಈ ಒಪ್ಪಂದದ ಉದ್ದೇಶವಾಗಿವೆ.

ಈ ಒಪ್ಪಂದವು ಸಾಲದ ಒಪ್ಪಂದಕ್ಕೆ ಸಹಿ ಹಾಕಲು ಮತ್ತು ಕಾರಿಡಾರ್-1, ಕಾರಿಡಾರ್-3, ಡಿಪೋಗಳ ಸಿವಿಲ್ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲು ಮತ್ತು ಅಂತಿಮಗೊಳಿಸಲು ಮತ್ತು ಸಾಲದ ಮೂಲಕ ಹಣ ಪಡೆಯುವ ಸಮಗ್ರ ವ್ಯವಸ್ಥೆಯ ಟೆಂಡರ್‌ಗಳಿಗೆ ದಾರಿ ಮಾಡಿಕೊಡುತ್ತದೆ. ಬಿ ಎಸ್ ಆರ್ ಪಿ ಜಾರಿಯನ್ನು ಸುಗಮಗೊಳಿಸುವ ಮಹತ್ವದ ಬೆಳವಣಿಗೆಗಳಲ್ಲಿ ಇದು ಒಂದಾಗಿದೆ. ದ್ವಿಪಕ್ಷೀಯ ಧನಸಹಾಯ ಏಜೆನ್ಸಿಗಳೊಂದಿಗೆ ಸಾಲ ಒಪ್ಪಂದಕ್ಕೆ ಸಹಿ ಹಾಕಲು ತ್ರಿಪಕ್ಷೀಯ ಒಪ್ಪಂದವು ಕಡ್ಡಾಯ ಅವಶ್ಯಕತೆಗಳಲ್ಲಿ ಒಂದಾಗಿದೆ ಮತ್ತು ಈ ಮಹತ್ವಾಕಾಂಕ್ಷೆಯ ಯೋಜನೆಗಾಗಿ ಜರ್ಮನಿಯ ಕೆ ಎಫ್ ಡಬ್ಲೂ ಮತ್ತು ಲಕ್ಸೆಂಬರ್ಗ್ ಯುರೋಪಿಯನ್ ಇನ್ವೆಸ್ಟ್‌ಮೆಂಟ್ ಬ್ಯಾಂಕ್ ನಿಂದ 800 ಮಿಲಿಯನ್ ಯೂರೋ ಅಂದರೆ 7438 ಕೋಟಿ ರೂ. ಸಾಲ ಪಡೆಯಲು ನೆರವಾಗಲಿದೆ. 2023ರ ಡಿಸೆಂಬರ್ 15ರಂದು ಜರ್ಮನ್ ಬ್ಯಾಂಕ್, ಕೆ ಎಫ್ ಡಬ್ಲ್ಯೂ ನೊಂದಿಗೆ 500 ಮಿಲಿಯನ್ ಯುರೋ ಸಾಲದ ಒಪ್ಪಂದವನ್ನು ಸಹಿ ಮಾಡಲಾಗಿದೆ.

## ಕ-ರೈಡ್, ಕೆ ಎಫ್ ಡಬ್ಲ್ಯೂ ಅಭಿವೃದ್ಧಿ ಬ್ಯಾಂಕ್ ಜತೆ ಸಾಲ ಒಪ್ಪಂದಕ್ಕೆ ಸಹಿ

ಕರ್ನಾಟಕ ರೈಲ್ವೆ ಮೂಲಸೌಲಭ್ಯ ಅಭಿವೃದ್ಧಿ ಕಂಪನಿ ನಿಯಮಿತ (ಕ-ರೈಡ್) ನಿಂದ ಜರ್ಮನಿಯ ಕೆ ಎಫ್ ಡಬ್ಲ್ಯೂ ಅಭಿವೃದ್ಧಿ ಬ್ಯಾಂಕ್‌ನೊಂದಿಗೆ ಸಾಲ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಭಾರತ ಸರ್ಕಾರದ ಹಣಕಾಸು ಸಚಿವಾಲಯದಡಿ ಬರುವ ಆರ್ಥಿಕ ವ್ಯವಹಾರಗಳ ಇಲಾಖೆ ಮತ್ತು ಕರ್ನಾಟಕ ಸರ್ಕಾರದ ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ ಮತ್ತು ಕೆ ಎಫ್ ಡಬ್ಲ್ಯೂ ಅಧಿಕಾರಿಗಳು 2023ರ ಡಿಸೆಂಬರ್ 15 ರಂದು ನವದೆಹಲಿಯಲ್ಲಿ ಸಹಿ ಹಾಕಲಾಯಿತು. 500 ಮಿಲಿಯನ್ ಯುರೋ ಸಾಲ ಮತ್ತು 4.5 ಮಿಲಿಯನ್ ಯುರೋ ಅನುದಾನಕ್ಕೆ ಸಹಿ ಮಾಡಲಾಗಿದೆ. ಈ ಸಾಲ ಒಪ್ಪಂದಕ್ಕೆ ಸಹಿ ಮಾಡುವುದರಿಂದ ಕಾರಿಡಾರ್ 1, ಕಾರಿಡಾರ್ 3 ಮತ್ತು ಸಿಸ್ಟಂ ಟೆಂಡರ್‌ಗಳ ಆಹ್ವಾನವನ್ನು ಸುಗಮಗೊಳಿಸುತ್ತದೆ ಮತ್ತು ಬಿ ಎಸ್ ಆರ್ ಪಿ ಯ ಪ್ರಗತಿಯನ್ನು ಮತ್ತಷ್ಟು ವೇಗಗೊಳಿಸುತ್ತದೆ. ಬಿ ಎಸ್ ಆರ್ ಪಿ ಗೆ ಯೋಜನೆ ಪೂರ್ಣಗೊಳಿಸಲು 15,767 ಕೋಟಿ ರೂ. ಯೋಜನೆಗೆ ಅನುಮೋದನೆ ನೀಡಲಾಗಿದ್ದು, ಅದರಲ್ಲಿ 7,438 ಕೋಟಿ ರೂ. (ಯೂರೋ 800 ಮಿಲಿಯನ್ ಅಂದಾಜು.) ಹಣವನ್ನು ಬಹುಪಕ್ಷೀಯ/ದ್ವಿಪಕ್ಷೀಯ ಹಣಕಾಸು ಸಂಸ್ಥೆಗಳಿಂದ ಸಾಲದ ರೂಪದಲ್ಲಿ ಪಡೆಯುವ ಅಂಶ ಸೇರಿದೆ.

## ಬೆಂಗಳೂರು ಉಪನಗರ ರೈಲು ಯೋಜನೆ (ಬಿಎಸ್ ಆರ್ ಪಿ): ಕನಕ ಮಾರ್ಗದ ಸಿವಿಲ್ ಕಾಮಗಾರಿ ಎಲ್ ಅಂಡ್ ಟಿ ಗೆ

ಬೆಂಗಳೂರು ಉಪನಗರ ರೈಲ್ವೆ ಯೋಜನೆಯ ಕಾರಿಡಾರ್-4 ಅಥವಾ 'ಕನಕ' ಮಾರ್ಗದಲ್ಲಿ ಇಪಿಸಿ ಮಾದರಿಯಲ್ಲಿ ಹೀಲಲಿಗೆ ಮತ್ತು ರಾಜಾನುಕುಂಟೆ ನಡುವಿನ ಸಂಬಂಧಿತ ಕಾಮಗಾರಿಗಳನ್ನು ಒಳಗೊಂಡಂತೆ 8.960 ಕಿಮೀ ಉದ್ದದ ಎತ್ತರದ ವಯಾಡಕ್ಟ್ ವಿನ್ಯಾಸ ಮತ್ತು ನಿರ್ಮಾಣಕ್ಕಾಗಿ ಮತ್ತು 37.920 ಕಿಮೀ ಉದ್ದದ (ನಿಲ್ದಾಣ ಕಟ್ಟಡಗಳನ್ನು ಹೊರತುಪಡಿಸಿ) ಸ್ವೀಕಾರ ಪತ್ರವನ್ನು (ಎಲ್ ಒಎ) ಅನ್ನು 2023ರ ಡಿಸೆಂಬರ್ 30ರಂದು ಲಾರ್ಸೆನ್ ಅಂಡ್ ಟುಬ್ರೋ (ಎಲ್ ಅಂಡ್ ಟಿ)ಗೆ ನೀಡಲಾಗಿದೆ. ಒಪ್ಪಂದದ ಮೌಲ್ಯ 1,040.51 ಕೋಟಿ ರೂ. (ಜಿಎಸ್‌ಟಿ ಸೇರಿದಂತೆ) ಮತ್ತು ಒಪ್ಪಂದದ ಅವಧಿ 30 ತಿಂಗಳು. ಭೌತಿಕ ಕೆಲಸವು ಶೀಘ್ರದಲ್ಲೇ ಆರಂಭವಾಗುವ ನಿರೀಕ್ಷೆಯಿದೆ. ಈ ಒಪ್ಪಂದವು ಯಲಹಂಕದ ಬಳಿ ಬಿ ಎಸ್ ಆರ್ ಪಿ ಕಾರಿಡಾರ್-1 ಮತ್ತು ಕಾರಿಡಾರ್-4 ಗಾಗಿ 1.2 ಕಿಮೀ ಉದ್ದದ ಡಬಲ್ ಡೆಕ್ಕರ್ ಜೋಡಣೆಯ ನಿರ್ಮಾಣವನ್ನು ಒಳಗೊಂಡಿದೆ. ಬೆನ್ನಿಗಾನಹಳ್ಳಿ ಬಳಿ ಬಿಎಂಆರ್‌ಸಿಎಲ್ ನಿಂದ 500ಮೀ ಕೆಳಗೆ ಉದ್ದದ ಬಿ ಎಸ್ ಆರ್ ಪಿ ಎಲಿವೇಟೆಡ್ ವಾಯಡಕ್ಟ್ ನಿರ್ಮಾಣ, ಬಿ ಎಸ್ ಆರ್ ಪಿ ಮತ್ತು ಬಿಎಂಆರ್‌ಸಿಎಲ್ ನಡುವೆ ಸರಿಯಾದ ರೀತಿಯಲ್ಲಿ ಹಕ್ಕನ್ನು ಹಂಚಿಕೊಳ್ಳುವುದನ್ನು ಸಹ ಒಪ್ಪಂದ ಒಳಗೊಂಡಿದೆ. ಈ ಮಾದರಿ ಭಾರತದಲ್ಲಿ ಇದೇ ಮೊದಲು. ನೈಋತ್ಯ ರೈಲ್ವೆಯು ಕಾರಿಡಾರ್-4 ಗಾಗಿ ರೈಲ್ವೆ ಭೂಮಿಯನ್ನು (115.5 ಎಕರೆ) ಮುಂಗಡವಾಗಿ ಹಸ್ತಾಂತರಿಸುವ ಹಂತದಲ್ಲಿದ್ದು, ಶೀಘ್ರದಲ್ಲೇ ಹಸ್ತಾಂತರಿಸುವ ನಿರೀಕ್ಷೆಯಿದೆ.

## 'Kride Talent Hunt'

In a world with never-ending facades,
Where our intermingled story starts
There lays in folds, pieces of me
Treading in a maze of oddities
A masterpiece at display
and a secret hidden away
In a broad horizon with spaces to fill
where my pieces stand still
There is one that bursts ahead,
Too fast to react and first to sled
The other cooped in, waiting to pounce
One speaks out but seldom knows the way around Some feel like the saviours
concurring my darkest fears
Marching ahead with all their might
In a war with bloodshed in black and white
But there is the unworthy One
Shrivelled up behind with his army in front
Taking one step at a time,
To be saved is his nature by design
Fleeing away from those who can't fight him
Letting his men sacrifice for his own whims
One turn, the second, the third, a few mores
A series of shut and opened doors
All his steps lead him to his end
The weakest of me lies trapped in his own den
In this land of warring selves,
With one last attack, my pieces fell

- **Vidisha Singh,**
B.Tech, IIT Kanpur
D/o Vijaykumar, GM, Corridor-2





'ಸಂಪರ್ಕ' ಬಿ.ಎಸ್.ಆರ್.ಪಿ ಸುದ್ದಿ ಪತ್ರ, ವಿನ್ಯಾಸ, ಸಂಕಲನ ಮತ್ತು ಪ್ರಕಟಣೆ : ಸಾರ್ವಜನಿಕ ಸಂಪರ್ಕ ವಿಭಾಗ, ಕ-ರೈಡ್
ಸಂಪಾದಕರು: ಶ್ರೀಮತಿ ಪುನೀತಾ ಎಸ್. ಭಾ.ಸು.ಸೇ, ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ / ಜಂಟಿ ಪ್ರಧಾನ ವ್ಯವಸ್ಥಾಪಕರು, ಕ-ರೈಡ್
ಉಪ ಸಂಪಾದಕರು: ಶ್ರೀಮತಿ ರೇಷ್ಮಾ, ವ್ಯವಸ್ಥಾಪಕರು, ಸಾರ್ವಜನಿಕ ಸಂಪರ್ಕ ವಿಭಾಗ
ಪುಟವಿನ್ಯಾಸ ಮತ್ತು ಛಾಯಾಗ್ರಹಣ: ಶ್ರೀ ಪ್ರೇಮ್ ಸಾಗರ್ ವಿ, ಹಿರಿಯ ಕಾರ್ಯನಿರ್ವಾಹಕರು, ಸಾರ್ವಜನಿಕ ಸಂಪರ್ಕ ವಿಭಾಗ
ನಿಮ್ಮ ಯಾವುದೇ ಸಲಹೆ / ಸೂಚನೆಗಳಿಗಾಗಿ ನಮಗೆ ಇಮೇಲ್ ಮಾಡಿ: kridepr@gmail.com